# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 308 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.06.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 308 • PRGI No:KARKAN/2023/88055 • VIJAYANAGARA • 18.06.2025 • Wednesday • Page:04 • Rs:2



Grow with Us, Advertise in Hampi Times
Print & Digital Media
“Looking to bring your sales and services to readers Fingertips? HAMPI TIMES is the ideal platform”



Call:9448633038/email:hampitimes@gmail.com


**ಮೈಕ್ರೋ ನ್ಯೂಸ್**

## ಅಂತರಾಷ್ಟ್ರೀಯ ಯೋಗ ಡೇ ಜೂನ್ 20 & 21 ವಿವಿಧ ಕಾರ್ಯಕ್ರಮ

**ಹಂಪಿ ಟೈಮ್ಸ್ ಕೊಪ್ಪಳ**

ಅಂತರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ತ ಕೊಪ್ಪಳ ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ಜೂನ್ 20 ಮತ್ತು 21ರಂದು ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜೂನ್ 21 ರಂದು "11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ-2025" ನ್ನು “ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ” ಎಂಬ ಘೋಷವಾಕ್ಯದೊಂದಿಗೆ ಆಚರಿಸಲು ಆಯುಷ್ ಮಂತ್ರಾಲಯವು ನಿರ್ಧರಿಸಿದ್ದು, ಪ್ರಯುಕ್ತ ಕೊಪ್ಪಳ ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ಅಂದು ಬೆಳಿಗ್ಗೆ 6.30 ಗಂಟೆಗೆ ನಗರದ ತಾಲೂಕಾ ಕ್ರೀಡಾಂಗಣದಲ್ಲಿ ಯೋಗ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಪೂರ್ವಭಾವಿಯಾಗಿ ಜೂನ್ 20ರ ಸಾಯಂಕಾಲ 4 ಗಂಟೆಯಿಂದ 6 ಗಂಟೆಯವರೆಗೆ ಯೋಗಜಾಥಾವನ್ನು ಆಯೋಜಿಸಲಾಗಿದ್ದು, ಯೋಗಜಾಥಾವು ಶ್ರೀ ಗವಿಮಠದ ಆವರಣದಿಂದ ಪ್ರಾರಂಭವಾಗಿ ಗಡಿಯಾರ ಕಂಬ, ಅಶೋಕ ಸರ್ಕಲ್ ಮೂಲಕ ತಾಲೂಕಾ ಕ್ರೀಡಾಂಗಣಕ್ಕೆ ಆಗಮಿಸಿ ಮುಕ್ತಾಯವಾಗಲಿದೆ.

ಜೂ. 21ರ ಬೆಳಿಗ್ಗೆ 6.30ಕ್ಕೆ ನಗರದ ತಾಲೂಕಾ ಕ್ರೀಡಾಂಗಣದಲ್ಲಿ ನಡೆಯುವ ಜಿಲ್ಲಾಮಟ್ಟದ ಯೋಗ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಎಲ್ಲಾ ಇಲಾಖಾಧಿಕಾರಿಗಳು, ಸಿಬ್ಬಂದಿಗಳು, ಸರ್ವ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಕೊಪ್ಪಳ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪರ್ವತಗೌಡ ಬ. ಹಿರೇಗೌಡರ ತಿಳಿಸಿದ್ದಾರೆ.

# ಹೈಟೆಕ್ ಪ್ರವಾಸಿ ಮಂದಿರ ಶೀಘ್ರ

### ಕಳಪೆ ರಸ್ತೆ ಕಾಮಗಾರಿ, ಅನಗತ್ಯ ವಿಳಂಬ, ನಿರ್ಲಕ್ಷ್ಯತನ ಸಲ್ಲದು

### ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಿಕಿಹೊಳಿ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾಗಿ ನೂತನವಾಗಿ 20 ಕೊಠಡಿಗಳ ಹೈಟೆಕ್ ಪ್ರವಾಸಿ ಮಂದಿರ ನಿರ್ಮಾಣಕ್ಕೆ ಶೀಘ್ರ ಕ್ರಮವಹಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಸಚಿವರಾದ ಸತೀಶ್ ಜಾರಿಕಿಹೊಳಿ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಂಗಳವಾರ ಅವರು ಮಾತನಾಡಿದರು. ಪ್ರತಿ ಎರಡು ತಿಂಗಳಿಗೊಮ್ಮೆ ಪಿಡಬ್ಲ್ಯೂಡಿ ಅಧಿಕಾರಿಗಳು ಅಯಾ ಶಾಸಕರ ನೇತೃತ್ವದಲ್ಲಿ ಕಾಮಗಾರಿಗಳ ಪ್ರಗತಿ, ಸ್ಥಳೀಯ ಸಮಸ್ಯೆಗಳ ಅವಲೋಕನ, ಅಗತ್ಯವಿರುವ ಕಾಮಗಾರಿಗಳ ಕ್ರಿಯಾಯೋಜನೆ ಕುರಿತು ಕಡ್ಡಾಯವಾಗಿ ಸಭೆ ನಡೆಸಿ ವರದಿ ಸಲ್ಲಿಸಬೇಕು. ಇಲಾಖೆಯ ಯಾವುದೇ ಕಾಮಗಾರಿಗಳು ಕಳಪೆ ಗುಣಮಟ್ಟ, ನಿರ್ಲಕ್ಷ್ಯತನ, ವಿಳಂಬ ಆಗದಂತೆ ಪೂರ್ಣಗೊಳಿಸಿ ಸಾರ್ವಜನಿಕರ ಅನುಕೂಲಕ್ಕೆ ಒದಗಿಸಬೇಕು. ಈಗಾಗಲೇ ರಾಜ್ಯದಲ್ಲಿ ಗಡಿ ರಸ್ತೆಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ನೆರೆ ರಾಜ್ಯದ ರಸ್ತೆಗಳಿಗೂ, ನಮ್ಮ ರಾಜ್ಯದ ರಸ್ತೆಗಳಿಗೆ ಹೋಲಿಕೆ ಮಾಡದಂತೆ ಹೆಚ್ಚಿನ ಗುಣಮಟ್ಟದಲ್ಲಿ ರಸ್ತೆ ಅಭಿವೃದ್ಧಿಗೆ ಅನುದಾನ ಕಲ್ಪಿಸಲಾಗಿದೆ. ಜಿಲ್ಲೆಯ ಪಿಡಬ್ಲ್ಯೂಡಿ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇಲ್ಲ. ಎಲ್ಲಾ ಎಇಇ, ಇಇ ಹೆಚ್ಚಿನ ಮುತುವರ್ಜಿ ವಹಿಸಿ ವಿಳಂಬ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು. ಎಇಇ ನಿಮ್ಮ ಸ್ಥಳೀಯ ಶಾಸಕರೊಂದಿಗೆ ಉತ್ತಮ ಸಂವಹನದೊಂದಿಗೆ ಸಾಮಾನ್ಯ ಜನರ ಬೇಡಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ಕೂಡ್ಲಿಗಿ ಕ್ಷೇತ್ರದ ಉಜ್ಜಿನಿ ಮತ್ತು ಗುಡೆಕೋಟೆಯಲ್ಲಿ ಪ್ರವಾಸಿ ಮಂದಿರ ನಿರ್ಮಾಣದ ಅಗತ್ಯವಿದೆ. ಹೊಸಹಳ್ಳಿ, ಇಮಾಡಪುರ, ಬಣವಿಕಲ್ಲು ಗ್ರಾಮದಲ್ಲಿ ಚತುಷ್ಪತ ರಸ್ತೆ ನಿರ್ಮಾಣ, ಪಟ್ಟಣದಲ್ಲಿ ಬೈಪಾಸ್ ರಸ್ತೆ ನಿರ್ಮಾಣ ಸೇರಿ ಅಗಲೀಕರಣ, ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಟ್ಟು ಹೋಗಿರುವ ಸೇವಾ ರಸ್ತೆಗಳ ನಿರ್ಮಾಣ ಕಾರ್ಯ ನಡೆಯಬೇಕಿದೆ. ಜಿಲ್ಲೆಯಲ್ಲಿ ಡಿಎಂಎಫ್, ಕೆಎಂಆರ್‌ಸಿ ಹಾಗೂ ಕೆಕೆಆರ್‌ಡಿಬಿ ಯೋಜನೆಯಡಿ ಅನುದಾನ ಲಭ್ಯತೆ ಕಡಿಮೆ ಇದ್ದು, ರಾಜ್ಯ ಸರ್ಕಾರದ ಅನುದಾನದ ಅಗತ್ಯವಿದೆ. ಹೊಸಹಳ್ಳಿ ಹೋಬಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಶಾಲೆ ನಿರ್ಮಾಣ ಕಾರ್ಯ ನೆನಗುದಿಗೆ ಬಿದ್ದಿದೆ. ಅಧಿಕಾರಿಗಳು ತ್ವರಿತ ವೇಗ ನೀಡುವ ಮೂಲಕ ಪೂರ್ಣಗೊಳಿಸಲು ಅಗತ್ಯ ಅನುದಾನ ನೀಡಬೇಕಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ದ್ವಿಚಕ್ರ ವಾಹನಗಳು ಅಪಘಾತಗೊಂಡು ಹಿಂಬದಿ ಸವಾರರ ಸಾವಿನ ಸಂಖ್ಯೆ ಹೆಚ್ಚಾಗಿದೆ. ವೈಜ್ಞಾನಿಕವಾಗಿ ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಹಾನಗಲ್ ಮೂಲಕ ಇಟಿಗಿ, ಕೊಟ್ಟೂರು, ಉಜ್ಜಿನಿ, ಗುಡೇಕೋಟೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ ಆದ್ಯತೆ ನೀಡಬೇಕು ಎಂದರು.

ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ ಮಾತನಾಡಿ, ಕೊಟ್ಟೂರು ನೂತನ ತಾಲೂಕಾದ ಹಿನ್ನಲೆಯಲ್ಲಿ ಪ್ರತ್ಯೇಕವಾಗಿ ಪಿಡಬ್ಲ್ಯೂಡಿ ಕಚೇರಿ ಆರಂಭಿಸಲು ಕ್ರಮ ವಹಿಸಬೇಕು. ಮಲ್ಲನಾಯಕನಹಳ್ಳಿ >>4

# ಅತಿಸಾರ ಭೇದಿ ನಿಯಂತ್ರಣಕ್ಕೆ ಓಆರ್‌ಎಸ್ ಪಾನಕ ಕುಡಿಸಿ

### ಸ್ಟಾಪ್ ಡಯೇರಿಯಾ ಪಾಕ್ಷಿಕ ಅಭಿಯಾನಕ್ಕೆ ಚಾಲನೆ




**ಹಂಪಿ ಟೈಮ್ಸ್ ಹೊಸಪೇಟೆ**

ಓಆರ್‌ಎಸ್ (ಓರಲ್ ರಿಹೈಡ್ರೇಶನ್ ಸಲ್ಯೂಷನ್) ಮತ್ತು ಜಿಂಕ್ ಮಾತ್ರೆ ಅತಿಸಾರ ಭೇದಿ ನಿಯಂತ್ರಣಕ್ಕೆ ಉತ್ತಮ ಮದ್ದು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡಮನಿ ಹೇಳಿದರು.

ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿ ವ್ಯಾಪ್ತಿಯ ಚಿಲಕನಹಟ್ಟಿಯಲ್ಲಿ ಸರ್ಕಾರಿ ಎಲ್‌ಕೆಜಿ-ಯುಕೆಜಿ ಶಾಲೆಯ ಹಮ್ಮಿಕೊಂಡಿದ್ದ "ಸ್ಟಾಪ್ ಡಯೇರಿಯಾ ಪಾಕ್ಷಿಕ" ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು. 0-5 ವರ್ಷದೊಳಗಿನ ಮಕ್ಕಳಲ್ಲಿ ಅತಿಸಾರ ಭೇದಿ ನಿಯಂತ್ರಣಕ್ಕಾಗಿ ಓಆರ್‌ಎಸ್ ಪಾನಕವನ್ನು ಕುಡಿಸುವುದರಿಂದ ಅತಿಸಾರ ಭೇದಿಯ ಹರಡುವಿಕೆ ಮತ್ತು ಸಂಭವವನ್ನು ಗಣನೀಯವಾಗಿ ತಡೆಯಬಹುದಾಗಿದೆ. ಮಕ್ಕಳ ಕೈಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಅತಿಯಾಗಿ ಮಗು ಕಿರಿಕಿರಿ ಉಂಟು ಮಾಡುವುದು, ಮಗುವಿನ ಕಣ್ಣುಗಳು ಒಳಗೆ ಹೋದಂತೆ ಇರುವುದು, ಮಗುವಿಗೆ ತುಂಬಾ ಬಾಯಾರಿಕೆಯಾಗುವುದು, ಮಗುವಿನ ಹೊಟ್ಟೆಯ ಚರ್ಮವನ್ನು ಚಿವುಟಿ ಎಳೆದುಬಿಟ್ಟಾಗ ನಿಧಾನವಾಗಿ ಮೊದಲಿನ ಸ್ಥಿತಿಗೆ ಬರುವುದು ಇವು ನಿರ್ಜಲೀಕರಣದ ಲಕ್ಷಣಗಳಾಗಿದ್ದು, ಇಂತಹ ಸಂದರ್ಭದಲ್ಲಿ ಹೆಚ್ಚಿನ ಚಿಕಿತ್ಸೆಗೆ ತಕ್ಷಣವೇ ಆಸ್ಪತ್ರೆಗೆ ತೆರಳಬೇಕು ಎಂದರು. ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಧರ್ಮನಗೌಡ, ಶಾಲಾ ಶಿಕ್ಷಕರು, ಸಮುದಾಯ ಆರೋಗ್ಯ ಅಧಿಕಾರಿ ಬಸವರಾಜ ಅಂಗಡಿ ಮಕ್ಕಳಿದ್ದರು.


Call Us for Ads: 9448633038






M/s Muneer Automotives LLP (Muneer Suzuki)
No.448, A.No.470, 16th Ward, Basaveshwara Badavane, 100 Bed Hospital Road, Amaravathi, HOSAPETE-583201, Vijayanagara Dist.
Sales: 9900702149, 6366655589 | Service: 6366655586

## ಬೆಳಕಿನ ಹಾದಿ

# ನಂಬಿಕೆ ಇರಲಿ, ಅಂಧಾನುಕರಣೆ ಬೇಡ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ರಂಗಣ್ಣ, ಬಂಗಾರುಪಟ್ಟಣದ ಶ್ರೀಮಂತ ಸಂಪ್ರದಾಯಸ್ಥ ಮನೆತನದ ವ್ಯಕ್ತಿ. ಆದರೆ ಸಂಪ್ರದಾಯಕ್ಕೆ ವಿರುದ್ಧವಾದ ವ್ಯಕ್ತಿತ್ವ ಹೊಂದಿದವನು. ಚಟಗಳಲ್ಲಿ ಸಕಲ ಕಲಾವಲ್ಲಭ. ರಂಗಣ್ಣ ಇಷ್ಟೆಲ್ಲಾ ಚಟಗಳನ್ನು ಮೈಗೂಡಿಸಿಕೊಂಡಿದ್ದರೂಮಠಮಾನ್ಯಗಳಲ್ಲಿ ನೆಡೆಯುವ ಧಾರ್ಮಿಕ ಕಾರ್ಯಗಳಲ್ಲಿ ತನ್ನ ಶಕ್ತಿಯಾನುಸಾರ ಸೇವೆ ಸಲ್ಲಿಸುತ್ತಿದ್ದ. ರಂಗಣ್ಣ ತಾನು ಮೈಗೂಡಿಸಿಕೊಂಡಿದ್ದ ಚಟಗಳಿಂದ ಎಲ್ಲವನ್ನೂ ಕಳೆದುಕೊಂಡು ಶಾಶ್ವತವಾಗಿ ಬೀದಿಪಾಲಾದ. ಬಂಧು ಬಾಂಧವರು ಅವನನ್ನು ದೂರ ಇಟ್ಟರು. ತಾನು ಸೇವೆ ಸಲ್ಲಿಸುತ್ತಿದ್ದ ಮಠಗಳು ಅವನಿಗೆ ಆಶ್ರಯ ನೀಡಲಿಲ್ಲ. ಉದರ ಪೋಷಣೆಗಾಗಿ ಸಾರಾಯಿ, ಗಾಂಜಾ ಮಾರಾಟ ಮಾಡಿ, ಕಂಡ ಕಂಡಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ. ಶಾಶ್ವತ ನೆಲೆ ಕಂಡುಕೊಳ್ಳಲು ಪ್ರಯತ್ನಿಸಲಿಲ್ಲ. ಕೆಲವು ಸಲ ಕೆಲಸವಿಲ್ಲದೇ ಹೊಟ್ಟೆ ಹೊರೆಯುವುದು ಕಷ್ಟವಾಗುತ್ತಿತ್ತು. ಅದಕ್ಕಾಗಿ ಒಂದು ಉಪಾಯ ಕಂಡುಕೊಂಡ.

ಜೀವನದಲ್ಲಿ ನೆಲೆ ಕಂಡುಕೊಳ್ಳಲು ಕಾವಿ ತೊಡಲು ನಿರ್ಧರಿಸಿದ. ಆದರೆಸಾರಾಯಿಗಾಂಜಾಸಹವಾಸಗಳುಆತನನ್ನುಚರಂಡಿವಾಸಿಯನ್ನಾಗಿ ಮಾಡಿದವು. ಆದರೂ ಕಾವಿ ಬಿಡದ ರಂಗಣ್ಣ ಊರು ಊರು ಸುತ್ತುತ್ತಾ ಹೊಟ್ಟೆ ತುಂಬಿಸಿಕೊಳ್ಳತೊಡಗಿದ. ಹೀಗೆ ಅಲೆದಾಡುತ್ತಾ ಸಮುದ್ರತೀರ್ಥ ಎಂಬ ಹಳ್ಳಿಗೆ ಬಂದು ಸೇರಿದ.

ಸಮುದ್ರತೀರ್ಥ ಹಳ್ಳಿಯ ಜನರು ತುಂಬಾ ಮುಗ್ಧರು ಹಾಗೂ ದೈವೀ ಭಕ್ತರು. ಇದನ್ನು ಅರಿತ ರಂಗಣ್ಣ ಕಾವಿಯನ್ನೆ ತನ್ನ ಅಸ್ತ್ರವನ್ನಾಗಿ ಮುಂದುವರೆಸಿದ. ಜನರ ಮನೋಸ್ಥಿತಿಯನ್ನು ಚೆನ್ನಾಗಿ ಅರಿತಿದ್ದ ರಂಗಣ್ಣ ಅವರ ಭೂತಕಾಲದ ಕೆಲ ದುಷ್ಟಾಂತಗಳನ್ನು ಅವರಿಂದಲೇ ತಿಳಿದು ಭವಿಷ್ಯದ ಬಗ್ಗೆ ಕಟ್ಟುಕತೆಗಳೊಂದಿಗೆ ಊಹಾಪೋಹಗಳನ್ನು ಸೇರಿಸಿ ಅವರ ಮನಸ್ಸನ್ನು ತನ್ನೆಡೆಗೆ ತಿರುಗುವಂತೆ ಮಾಡಿದ. ಅಲ್ಲಿನ ಜನರು ಈತನ ಮಾತಿಗೆ ಮಂತ್ರಮುಗ್ಧರಾದರು. ಈತನ ಮಾತು ವೇದವಾಕ್ಯವಾಯಿತು. ಆತನಿಗೆ ಎಲ್ಲ ಸೌಲತ್ತುಗಳನ್ನು ಒದಗಿಸಿಕೊಟ್ಟರು. ಅಂತಿಮವಾಗಿ ಆತನಿಗಾಗಿ ಮಠ ಕಟ್ಟಲು ನಿರ್ಧರಿಸಿದರು. ಇವೆಲ್ಲದರ ನಡುವೆ ಆತನ ಚಟಗಳು ನಿರಾತಂಕವಾಗಿ ಸಾಗಿದ್ದವು.

ಚಟಗಳೊಂದಿಗೆ ರಾಜಿ ಮಾಡಿಕೊಳ್ಳದ ರಂಗಣ್ಣ ಸಾಯಬಾರದ ವಯಸ್ಸಿನಲ್ಲಿ ಸತ್ತು ಹೋದ. ಸಮುದ್ರತೀರ್ಥದ ಜನ ರಂಗಣ್ಣನ ಶವವನ್ನು ಶೃಂಗರಿಸಿ ಊರು ತುಂಬಾ ಮೆರವಣಿಗೆ ಮಾಡಿ, ಊರ ಹೊರಗಿನ ಜಾಗದಲ್ಲಿ ಸಮಾಧಿ ಮಾಡಿದರು. ನಂತರ ಸಮಾಧಿಗೆ ನಿತ್ಯವೂ ಪೂಜೆ, ಅಭಿಷೇಕದ ವ್ಯವಸ್ಥೆ ಮಾಡಿದರು. ಬದುಕಿದ್ದಾಗ ಮಠ ಕಟ್ಟಬೇಕೆಂದಿದ್ದ ಜನ ಸತ್ತ ಮೇಲೆ ಬಿಡುತ್ತಾರೆಯೇ? ರಂಗಣ್ಣನ ಸಮಾಧಿಗೆ ಗುಡಿಯನ್ನೂ ಕಟ್ಟಿಸಿದರು. ರಂಗಣ್ಣ ರಂಗಸ್ವಾಮಿಯಾಗಿದ್ದ. ಸತ್ತಮೇಲೆ ಅಲ್ಲಿನ ಜನರ ಪಾಲಿಗೆ ದೇವರಾದ. ರಂಗಣ್ಣನ ಶವ ಮಾತ್ರ ಸಮಾಧಿಯಲ್ಲಿ ಬೆಚ್ಚಗೆ ಮಲಗಿ, ಜನರ ಮೌಢ್ಯವನ್ನು ನೋಡಿ, 'ಜನ ಮರುಳೋ, ಜಾತಕ ಮರುಳೋ' ಅಂತ ಕಿಲಕಿಲನೆ ನಗುತ್ತಿತ್ತು.

ಇದೊಂದು ವ್ಯಕ್ತಿಯ ನಿಜ ಜೀವನದ ಕಥೆ. ಭಾರತವು ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕತೆ ಹೊಂದಿ ಪವಿತ್ರ ಭೂಮಿ. ಈ ದೇಶದಲ್ಲಿ ನಾವು ಹುಟ್ಟಿರುವುದು ನಮ್ಮ ಪೂರ್ವ ಜನ್ಮದ ಪುಣ್ಯವೆಂದೇ ಭಾವಿಸಬೇಕು. ವಿದೇಶಿಗರು ಸಹ ಭಾರತದ ಭವ್ಯ ಪರಂಪರೆಯನ್ನು ಮತ್ತು ಆಧ್ಯಾತ್ಮಿಕತೆಯನ್ನು ಅಭ್ಯಸಿಸಲು ಇಲ್ಲಿಗೆ ಬರುತ್ತಿದ್ದಾರೆ. ಆದರೆ ಭಾರತೀಯರಾದ ನಾವು ಭಕ್ತಿ, ಶ್ರದ್ಧೆ ಮತ್ತು ಆಧ್ಯಾತ್ಮಿಕತೆಯನ್ನು ಸರಿಯಾಗಿ ಅರಿತುಕೊಂಡಿಲ್ಲ. ದೇವರು, ಆಧ್ಯಾತ್ಮಕ ದಲ್ಲಿ ನಂಬಿಕೆ ಇರಲಿ. ಆದರೆ ಅಂಧಾನುಕರಣೆ ಬೇಡ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಯುವಕರ ಶ್ರಮ ಅಭಿವೃದ್ಧಿಗೆ ಆಧಾರ ಸದ್ಬಳಕೆಗೆ ಸರ್ಕಾರ ಗಮನ ಹರಿಸಲಿ

ಜಗತ್ತಿನ ಬಹುತೇಕ ರಾಷ್ಟ್ರಗಳು ಯುವಜನತೆಯನ್ನೇ ಒಳಗೊಂಡಿದೆ ಮತ್ತು ಅಭಿವೃದ್ಧಿಗೆ ಪೂರಕವಾಗಿದೆ ಎನ್ನುವ ಮಾತು ಚಲನೆಯಲ್ಲಿ ಇದ್ದರೂ ಯುವಜನತೆ ತನ್ನ ಶಕ್ತಿಯನ್ನು ದೇಶದ ಮತ್ತು ತನ್ನ ಬೆಳವಣಿಗೆಗೆ ಬಳಸಿಕೊಳ್ಳುತ್ತಿಲ್ಲ ಅನ್ನೋದು ಇವೊತ್ತಿನ ಸತ್ಯವಾಗಿದೆ. ಹದಿನೆಂಟರಿಂದ ಮೂವತ್ತೈದು ವರ್ಷಗಳ ಒಳಗಿನವರನ್ನು ನಾವು ಯುವಕರು ಎಂದು ಕರೆದಿದ್ದೇವೆ. ಪ್ರತಿಯೊಬ್ಬ ಮಗುವು ಬೆಳೆದು ಯುವಕರಾಗುವ ತನಕ ಹೆತ್ತವರು, ಸಮಾಜ, ಸರ್ಕಾರಗಳು ಅನೇಕ ರೀತಿಯಲ್ಲಿ ಬೆಂಬಲ ನೀಡಿದೆ. ತಂದೆ-ತಾಯಿಗಳು ಶ್ರಮವಹಿಸಿ ಹೊಟ್ಟೆ, ಬಟ್ಟೆಯನ್ನು ಕಟ್ಟಿ. ನಾವು ಕಲಿತಿಲ್ಲ, ನಮಗೆ ಉನ್ನತವಾದ ಉದ್ಯೋಗ ಸಿಕ್ಕಲ್ಲ ಅನ್ನೋ ಯೋಚನೆಯನ್ನು ಬೆನ್ನ ಮೇಲೆ ಕಟ್ಟಿಕೊಂಡು ತನ್ನ ಮಕ್ಕಳಿಗೆ ಶಿಕ್ಷಣ ಕೊಡಿಸುವ ಜೊತೆಯಲ್ಲಿ ಅವರ ಬೆಳವಣಿಗೆಗೆ ಪೂರಕವಾದ ಸೌಲಭ್ಯವನ್ನು ಒದಗಿಸುತ್ತಿದ್ದಾರೆ. ಈ ನಡುವೆ ಬೆಳೆಯುವ ಮಕ್ಕಳು ಮನೆಯಲ್ಲಿಯೇ ವೃತ್ತಿ ಸಂಬಂಧಿತ ಕಾರ್ಯಗಳ ಅರಿವನ್ನು ಪಡೆಯುವುದು ಇದೆ. ಇನ್ನು ಉಳಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿ, ಸರ್ಕಾರಗಳು ಒದಗಿಸಿರುವ ಕಲಿಕೆ ಮತ್ತು ಕೌಶಲ್ಯ ಬೆಳವಣಿಗೆಯ ನೆಲೆಯ ತಿಳುವಳಿಕೆಯನ್ನು ಅನೇಕರು ಪಡೆಯುತ್ತಾರೆ. ಯುವಕ/ಯುವತಿಯರಾಗುವ ಪೂರ್ವದಲ್ಲಿ ಪ್ರತಿಯೊಬ್ಬರು ಶಿಕ್ಷಣವನ್ನು ಕಲಿಯುತ್ತಿದ್ದಾರೆ, ಈ ಶಿಕ್ಷಣವನ್ನು ಕೊಡಿಸುವ ಹೆತ್ತವರು ತನ್ನ ಮಗ/ಮಗಳು ಮುಂದೆ ಉನ್ನತ ಸ್ಥಾನ ಪಡೆದು ನಮ್ಮನ್ನು ಕಡೆಗಾಲದಲ್ಲಿ ಆರೈಕೆ ಮಾಡುತ್ತಾರೆ ಅನ್ನೋ ನಂಬಿಕೆಯ ಪರಂಪರೆ ಇದೆ. ಸರ್ಕಾರಗಳು ಅದೆಷ್ಟೋ ತೆರಿಗೆಯ ಹಣವನ್ನು ಮಕ್ಕಳ ಬೆಳವಣಿಗೆಗೆ ಬೇರೆ ಬೇರೆ ನೆಲೆಯಲ್ಲಿ ಖರ್ಚು ಮಾಡುತ್ತದೆ. ನಮ್ಮ ಸುತ್ತಲಿನ ಸಮಾಜವು ನನ್ನ ಮಗ, ಅವನ ಮಗ ಅನ್ನೋ ಬೇಧವಿಲ್ಲದೆ ಒಳ್ಳೆಯ ದಾರಿಯಲ್ಲಿ ನಡೆಯಬೇಕು ಸಂಸ್ಕಾರ ಪಡೆಯಬೇಕು ಎನ್ನುವ ನಿರೀಕ್ಷೆಯಲ್ಲಿ ತಪ್ಪು ಕಂಡರೆ ಅದನ್ನು ಖಂಡಿಸುವ, ಬದ್ಧಿ ಹೇಳುವ, ತಿದ್ದುವ ವಿವೇಚನೆಯನ್ನು ಇನ್ನೂ ಈ ಸಮಾಜ ಅಲ್ಪ ಪ್ರಮಾಣದಲ್ಲಿ ಉಳಿಸಿಕೊಂಡಿದೆ. ಈ ನಡುವೆ ಕಾಲದ ಚಲನೆಯ ನೆಲೆಯಲ್ಲಿ ಅದೆಷ್ಟೋ ಮಕ್ಕಳು ಯುವಕರಾಗುತ್ತಿದ್ದಾರೆ. ಯುವಕ/ಯುವತಿಯಾದ ಪ್ರತಿಯೊಬ್ಬರು ಇಂದು ಸಾಮಾನ್ಯವಾಗಿ ಪದವಿ ಶಿಕ್ಷಣವನ್ನು ಪಡೆದವರಾಗಿದ್ದಾರೆ.



ಡಾ. ಸುಬ್ರಹ್ಮಣ್ಯ ಸಿ ಕುಂದೂರು
ಮಂಗಳೂರು

Scan For Digital Colourful
HAMPI TIMES E-paper

ಯುವಕತೆಯನ್ನು ಹೊಂದಿದ ಬಹುತೇಕರು ಉದ್ಯೋಗ, ಶಿಕ್ಷಣ ಮತ್ಯಾವುದೋ ಕಾರಣಕ್ಕೆ ನಗರಗಳನ್ನು ಪ್ರವೇಶ ಮಾಡುತ್ತಿದ್ದಾರೆ; ಇನ್ನು ಉಳಿದಂತೆ ಅಲ್ಲಿಯೇ ಯಾವು ದಾದರೂ ಕೂಲಿ, ಇತ್ಯಾದಿ ಕೆಲಸಕ್ಕೆ ತೊಡಗಿದ್ದಾರೆ; ಕೆಲವರು ಬೈಕು, ಕಾರು ಹಿಡಿದು ಕೊಂಡು ಮನೆ ಯಿಂದ-ಪೇಟೆಗೆ, ಪೇಟೆ ಯಿಂದ-ಮನೆಗೆ ಅಲೆದಾಡು ತ್ತಿದ್ದಾರೆ; ನಮಗೆ ಸರಿಯಾದ ಕೆಲಸ ಸಿಕ್ಕಿಲ್ಲ, ಸಂಬಳ ಸರಿಯಿಲ್ಲ ನಾವು ಕೆಲಸ ಕೊಡುವವರು ಮಾಡುವವರಲ್ಲ ಅಂದುಕೊಂಡ ಕೆಲವರು ಬೀದಿ-ಬೀದಿ ಯನ್ನು ಅಲೆದು ಕೊನೆಗೆ ಕಳ್ಳರು, ಸುಳ್ಳರು, ಮೋಸಗಾರರಾಗಿ ಕದ್ದು ಮುಚ್ಚಿ ನಡೆಯುತ್ತಿದ್ದಾರೆ; ರಾಜಕೀಯ ಪಕ್ಷದ ರ್‍ಯಾಲಿ, ಪ್ರತಿಭಟನೆಗಳಲ್ಲಿ ಭಾಗಿಯಾಗಿಕೊಂಡು ಪೆಟ್ಟು ಜಗಳ ಮಾಡಿಕೊಂಡು ಮನೆಗೆ ಬಂದು ಅದೆಷ್ಟೋ ತಂದೆ-ತಾಯಿಯ ಕಣ್ಣೀರಿಗೆ ಕಲಶ ಪ್ರಾಯರಾಗಿದ್ದಾರೆ ಎನ್ನುವುದನ್ನು ನಾವುಗಳು ನಿತ್ಯ ನೋಡುತ್ತಿದ್ದೇವೆ ಮತ್ತು ಕೇಳುತ್ತಿದ್ದೇವೆ. ಯುವಜನತ'ಯನ್ನು ತುಂಬಿದ ದೇಶದಲ್ಲಿ ಇಪ್ಪತ್ತು ಭಾಗದಷ್ಟು ಯುವಕರು ಸಾಧನೆಯ ಹಾದಿಯಲ್ಲಿ ಬೆಳೆಯು ತ್ತಿದ್ದಾರೆ ಅನ್ನುವುದಾದರೆ ಇನ್ನೂ ಉಳಿದ ಯುವಕರು ದಾರಿ ತಪ್ಪಿದ್ದು ಏಕೆ? ಅವರನ್ನು ಮತಿ ತಪ್ಪಿಸಿದ್ದು ಯಾರು? ಎನ್ನುವುದನ್ನು ನಾವು ಯೋಚಿಸಬೇಕಾದ ಅಗತ್ಯವಿದೆ.



ವಯಸ್ಸು ಕೂಡುತ್ತಿದ್ದಂತೆ ದೇಹದಲ್ಲಿ ದೈಹಿಕವಾದ ಬದಲಾವಣೆಗಳು ಸಹಜವಾಗಿ ನಡೆಯುತ್ತದೆ. ಲೋಕದ ಆಸೆಗಳು ಹುಟ್ಟಿಕೊಳ್ಳುತ್ತದೆ ಇದು ಮನುಷ್ಯ ಸಹಜವೇ ಇದಕ್ಕೆಲ್ಲ. ಈ ಸಮಾಜದಲ್ಲಿ ಸಾಂಸ್ಥಿಕವಾದ ವ್ಯವಸ್ಥೆಗಳಿವೆ ಆದರೆ ಇಂದು ಆಧುನಿಕತೆಯ ಅಮಲಿನಲ್ಲಿ ಇಂತಹ ಸಂಸ್ಥೆಗಳು ಮತ್ತು ಜೀವನ ಮೀಮಾಂಸೆಯು ತನ್ನ ಕರ್ತವ್ಯ ಪ್ರಜ್ಞೆಯನ್ನು ಮರೆತಂತೆ ಕಾಣುತ್ತದೆ. ಪ್ರತಿಯೊಬ್ಬ ಯುವಕರು-ಯುವತಿಯರು ತನ್ನ ಬದುಕಿನ ಬಹು ಸಮಯವನ್ನು ಮೊಬೈಲ್ ಮೂಲಕ ಕಳೆಯುತ್ತಿದ್ದು ಅದರಲ್ಲಿನ ಆಗು-ಹೋಗುಗಳಿಗೆ ಹೊಂದಿಕೊಂಡಿದ್ದಾರೆ. ಆನ್ಲೈನ್ ಆಟಗಳು, ರೀಲ್ಸ್, ಚಾಟಿಂಗ್, ಮಾತುಕತೆಯಲ್ಲಿ ಮುಳುಗಿರುವುದು ಅವರ ಕ್ರಿಯಾಶೀಲತೆಯನ್ನು ನಾಶ ಮಾಡಿದೆ ಮತ್ತು ಕೆಲಸ ಮಾಡುವ ತಾಕತ್ತನ್ನು ಕಳೆಯುವಂತೆ ಮಾಡಿದೆ. ಬಹುತೇಕ ಯುವಕರು ಇಂದು ಮದ್ಯಪಾನ, ಧೂಮಪಾನ, ಗಾಂಜ ಇತ್ಯಾದಿ ಸೇವನೆಗೆ ದಾಸರಾಗಿ ಲೋಕದ ಅರಿವಿನಿಂದ ದೂರವಾಗಿದ್ದಾರೆ ಮತ್ತು ನಾನು ಏನು ಮಾಡುತ್ತಿದ್ದೇನೆ ಅನ್ನೋ ಸಾಮಾನ್ಯ ತಿಳುವಳಿಕೆಯು ಅವರಿಗೆ ಇಲ್ಲವಾಗಿದೆ. ಈ ಕಾರಣದಿಂದ ಸಮಾಜದ ಉನ್ನತೀಕರಣಕ್ಕೆ ಬೆಂಬಲವಾಗ ಬೇಕಾಗಿದ್ದ ಯುವಕರು ಸಮಾಜ ಘಾತುಕರಾಗುತ್ತಿರುವುದು ಮಾನವ ಕುಲದ ಅಸ್ಮಿತೆಯನ್ನು ಕೆಡಿಸುವಂತೆ ಮಾಡಿದೆ.

ಯುವಕರು ಇಂದು ಮುಖ್ಯವಾಗಿ ಸಾಮಾಜಿಕ ಮಾಧ್ಯಮದ ವಿವೇಚನೆಯ ಪ್ರಭಾವಕ್ಕೆ ಒಳಗಾಗಿದ್ದು ಲೋಕದಲ್ಲಿ ಇರುವ ಒಳ್ಳೆಯ, ಮೌಲ್ಯಯುತವಾದ ಸಾಮಾಜಿಕ ಉನ್ನತೀಕರಣಕ್ಕೆ ಯೋಗ್ಯವಾದ ಆಲೋಚನೆಯನ್ನು ಅಪ್ಪಿಕೊಳ್ಳುವುದಕ್ಕೆ ಯುವಕರಾದರು ಆಸಕ್ತಿ ಯನ್ನು ವಹಿಸುತ್ತಿಲ್ಲ. ಬದಲಿಗೆ ಹೆಚ್ಚು ಪ್ರಚಾರವನ್ನು ತರುವ, ಹಣವನ್ನು ರೂಪಿಸುವ ಮತ್ತು ದೈಹಿಕ ಸುಖವನ್ನು ನೀಡುವ ಕಡೆಗೆ ನಡೆಯುತ್ತಿರುವುದು ಸಾಮಾನ್ಯವಾಗಿದೆ. ಧಾರ್ಮಿಕವಾದ ಅಂಧತೆಗೆ ಬಲಿ ಬೀಳುವುದು, ಜಾತಿ ಹೋರಾಟಕ್ಕೆ ನಡೆಯುವುದು, ದೇಶ-ಭಾಷೆಯನ್ನು ಮರೆತು ಭಯೋತ್ಪಾದಕತೆಯನ್ನು ಹುಟ್ಟು ಹಾಕುವುದು ಅನೇಕ ಯುವಕರ ಸಾಧನೆ ಎನ್ನುವುದಾಗಿದೆ.

ಸಮಾಜ, ಸರ್ಕಾರ ಮತ್ತು ಕೌಟುಂಬಿಕ ಪರಿಸರವು ಯುವಕರನ್ನು ಕಟ್ಟುವ ಮಿಮಾಂಸೆಯನ್ನು ಗಟ್ಟಿಗೊಳಿಸಬೇಕಾಗಿದೆ. ಕೇವಲ ಉದ್ಯೋಗ, ಸಾಲ-ಸೌಲಭ್ಯಗಳನ್ನು ನೀಡುವುದು ಮಾತ್ರವಲ್ಲ. ಬದಲಿಗೆ ಯುವಕರನ್ನು ದಾರಿ ತಪ್ಪಿಸುತ್ತಿರುವ ಅನೇಕ ಆಗು-ಹೋಗುಗಳ ಮೇಲೆ ದಿಟ್ಟವಾದ ಕ್ರಮಗಳನ್ನು ಕೈಗೊಂಡು ಸುಮಾರ್ಗವನ್ನು ರೂಢಿಸುವುದಕ್ಕೆ ಯೋಚಿಸಬೇಕು. ಯುವಕರಾದ ಪ್ರತಿಯೊಬ್ಬರು ಈ ನೆಲದ ಸತ್ವವನ್ನು ಗಟ್ಟಿಯಾಗಿ ಅಪ್ಪಿಕೊಂಡು ದೇಶ, ಭಾಷೆ ಮತ್ತು ತಾಯಿ-ತಂದೆ ಅಭಿವ್ಯಕ್ತಿಗೆ ಪೂರಕವಾಗಿ ನಡೆಯುವಂತರಾಗಬೇಕು. ತಾನು ಬೆಳೆಯುವುದರ ಜೊತೆಯಲ್ಲಿ ತನ್ನವರನ್ನು ಬೆಳಸುವ ಗುಣ ಹೊಂದುವ ಜೊತೆಯಲ್ಲಿ ಮಾನವಿಯ ಸತ್ವವನ್ನು ರೂಪಿಸಿಕೊಂಡು ಸರ್ವ ಜನರ ಶಾಂತಿಯ ತೋಟಕ್ಕೆ ಹೆಜ್ಜೆಯ ಇಡುವಂತ ಕೆಲಸವನ್ನು ಮಾಡಬೇಕಾಗಿದೆ. ಒಟ್ಟಿನಲ್ಲಿ ಯುವಕರು ಪ್ರಜ್ಞಾವಂತರಾದರೆ ಲೋಕದ ಡೊಂಕನ್ನು ಸರಿಯಾದ ದಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ.

# ಬ್ಯಾಂಕ್ ಉದ್ಯೋಗಿ ಒರಟುತನ ತಗ್ಗಿಸಿದ ಅಜ್ಜಿ

## ಜನರು ಹಾಕಿರುವ ದಿರಿಸಿನ ಮೇಲೆ ಗೌರವಿಸದಿರಿ. ಯಾರನ್ನೂ ಅಸಡ್ಡೆ ಮಾಡದಿರಿ

ತುಸು ವಯಸ್ಸಾದ ಹೆಣ್ಣು ಮಗಳು ಆ ಬ್ಯಾಂಕಿನ ಶಾಖೆಯೊಂದಕ್ಕೆ ನಿಧಾನವಾಗಿ ನಡೆಯುತ್ತಾ ಬಂದರು. ಬ್ಯಾಂಕಿನ ತನ್ನ ಖಾತೆಯಿಂದ ಸ್ವಲ್ಪ ಹಣವನ್ನು ಬಿಡಿಸಿಕೊಂಡು ಹೋಗಲು ಆಕೆ ಬಂದಿದ್ದರು. ಎರಡು ನೂರು ರೂಗಳಿಗೆ ಆಕೆ ಚೆಕ್ ಬರೆದಿದ್ದರು. ಹಣ ಪಾವತಿ ಸ್ಥಳದಲ್ಲಿ ಕುಳಿತುಕೊಂಡಿದ್ದ ಬ್ಯಾಂಕ್ ನ ಉದ್ಯೋಗಿಯಾದ ಓರ್ವ ಹೆಣ್ಣು ಮಗಳು ವಯಸ್ಸಾದ ಅಜ್ಜಿ ಕೌಂಟರ್ ಬಳಿ ಬರುತ್ತಲೇ ಏನು ಬೇಕು? ಎಂದು ತುಸು ಅಸಹನೆಯಿಂದ ಕೇಳಿದಳು.

ಅಜ್ಜಿ ತನ್ನ ಚೆಕ್ಕನ್ನು ಆಕೆಯ ಕೈಗೆ ಕೊಡುತ್ತಲೇ ಇಷ್ಟು ಚಿಕ್ಕ ಪುಟ್ಟ ಅಮೌಂಟ್ಗೆ ನೀವು ಇಲ್ಲಿಗೆ ಬರಲೇಬಾರದು. ಎಟಿಎಂ ಮಷೀನ್‌ಗಳಲ್ಲಿ ನೀವು ಹಣ ಪಡೆದುಕೊಂಡರೆ ಒಳ್ಳೆಯದು... ನಿಮ್ಮಿಂದಾಗಿ ಉಳಿದ ಗ್ರಾಹಕರಿಗೆ ತಡವಾಗುತ್ತದೆ ಎಂದು ತುಸು ಒರಟಾಗಿಯೇ ಹೇಳಿದಳು. ಈಗಾಗಲೇ ಸಾಕಷ್ಟು ಗ್ರಾಹಕರೊಂದಿಗೆ ಆಕೆ ಸಣ್ಣಪುಟ್ಟ ವಾದಗಳನ್ನು ಮಾಡುತ್ತಲೇ ಇದ್ದದ್ದನ್ನು ಅಜ್ಜಿ ಗಮನಿಸಿದ್ದರು.

ಒಂದು ಕ್ಷಣ ಸುಮ್ಮನೆ ನಿಂತಿದ್ದ ವೃದ್ಧ ಮಹಿಳೆ ನಂತರ ಸಮಾಧಾನದಿಂದ ಒಂದೊಂದೇ ಪದಗಳನ್ನು ಅಳೆದು ತೂಗಿ ತನ್ನ ಪಾಸ್ ಬುಕ್ ಅನ್ನು ಆಕೆಯ ಕೈಯಲ್ಲಿಡುತ್ತಾ ಹಾಗಾದರೆ ನೀವು ನನ್ನ ಅಕೌಂಟ್ ನಲ್ಲಿರುವ ಎಲ್ಲಾ ಹಣವನ್ನು ನನಗೆ ತೆಗೆಸಿಕೊಡಿ. ತುಂಬಾ ಉಪಕಾರವಾಗುತ್ತದೆ ಎಂದು ಹೇಳಿ ವಿನಯದಿಂದ ಕೈಕಟ್ಟಿ ನಿಂತರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಗೆದ್ದ ಹೆಮ್ಮೆಯಿಂದ ಆ ಹೆಣ್ಣು ಮಗಳು ವೃದ್ದೆಯ ಪಾಸ್ ಬುಕ್ ಇಸಿದುಕೊಂಡು ನಿಧಾನವಾಗಿ ಅದರ ಪುಟ ತಿರುಗಿಸಿದಳು. ಒಂದು ಕ್ಷಣ ಆಕೆಯ ಎದೆ ಬಡಿತ ನಿಂತಂತಾಯಿತು. ಹಣೆಯಲ್ಲಿ ಬೆವರು ಸಾಲುಗಟ್ಟಿತು. ವೃದ್ದೆಯ ಅಕೌಂಟಿನಲ್ಲಿ 5 ಕೋಟಿಗಿಂತಲೂ ಹೆಚ್ಚು ಹಣ



ಜಮಾ ಇತ್ತು. ನಿಧಾನವಾಗಿ ಎದ್ದು ನಿಂತ ಆಕೆ "ಮೇಡಂ, ಸದ್ಯಕ್ಕೆ ನಮ್ಮ ಬ್ಯಾಂಕಿನಲ್ಲಿ ಅಷ್ಟೊಂದು ಹಣ ಇಲ್ಲ. ನೀವು ನಿಮ್ಮ ಅಕೌಂಟ್ನಲ್ಲಿರುವ ಹಣವನ್ನು ತೆಗೆಸಲು ಬ್ಯಾಂಕಿನ ಮೇಲಧಿಕಾರಿಗಳಿಗೆ ವಿಶೇಷವಾಗಿ ಪತ್ರ ಬರೆಯಬೇಕಾಗುತ್ತದೆ ಮತ್ತು ಇನ್ನೊಮ್ಮೆ ಬ್ಯಾಂಕಿಗೆ ಬರಬೇಕಾಗುತ್ತದೆ" ಎಂದು ಹೇಳಿದಳು.

ಓ! ಹೌದೇ, ಹಾಗಾದರೆ ಎಷ್ಟು ಹಣವನ್ನು ನಾನು ಈಗ ನನ್ನ ಖಾತೆಯಿಂದ ತೆಗೆಯಬಹುದು? ಎಂದು ಮೆಲುನಗೆ ನಗುತ್ತಾ ವೃದ್ಧ ಹೆಣ್ಣು ಮಗಳು ಕೇಳಿದರು. ಆಗ ಬ್ಯಾಂಕಿನ ಯುವತಿ ನೀವು ಐದು ಲಕ್ಷದವರೆಗೂ ಹಣವನ್ನು ತೆಗೆಯಬಹುದು ಎಂದು ಅತ್ಯಂತ ವಿನೀತಳಾಗಿ ಹೇಳಿದಳು. "ಒಳ್ಳೆಯದು ಹಾಗಾದರೆ ನನಗೆ 5 ಲಕ್ಷ ಹಣವನ್ನೇ ನನ್ನ ಖಾತೆಯಿಂದ ತೆಗೆದುಕೊಡಿ" ಎಂದು ಹೇಳಿದರು.

ವಿಪರೀತ ಮುಜುಗರದಿಂದ ಬ್ಯಾಂಕಿನ ಅಧಿಕಾರಿ ಹಣ ಎಣಿಸಲು ಆರಂಭಿಸಿ ಅಂತಿಮವಾಗಿ ಕೆಲ ನಿಮಿಷಗಳ ನಂತರ ವೃದ್ದೆಯ ಕೈಯಲ್ಲಿ ಹಣವನ್ನಿಟ್ಟು " ಮತ್ತೆ ತಮಗೆ ಏನಾದರೂ ಸಹಾಯ ಬೇಕೆ? " ಎಂದು ಕೇಳಿದಳು.

ವೃದ್ಧೆ ತನ್ನ ಹಣದಿಂದ ಕೇವಲ ಎರಡು ನೂರು ಹಣವನ್ನು ತೆಗೆದುಕೊಂಡು ಈ ಉಳಿದ ಹಣವನ್ನು ನಾನು ಮತ್ತೆ ನನ್ನ ಖಾತೆಗೆ ಡೆಪಾಸಿಟ್ ಮಾಡ ಬಯಸುತ್ತೇನೆ ಎಂದು ಹೇಳಿ ಆ ಹಣವನ್ನು ಮರಳಿ ಆಕೆಯ ಕೈಗೆ ಕೊಟ್ಟಳು. ಯುವತಿ ತಲೆ ತಗ್ಗಿಸಿದರೆ ಅಜ್ಜಿಯ ಮುಖದಲ್ಲಿ ಗೆಲುವಿನ ನಗೆ ಇತ್ತು.

ತುಂಬಾ ವರ್ಷಗಳ ಹಿಂದೆ ಕೇಳಿದ ಈ ಕಥೆ ನಮಗೆ ಬದುಕಿನ ಅತ್ಯಂತ ಕಹಿ ಸತ್ಯವಾದ ಅನಾವರಣವನ್ನು ಮಾಡುತ್ತದೆ. ಎಷ್ಟೋ ಬಾರಿ ದೊಡ್ಡ ದೊಡ್ಡ ಕಾರುಗಳಲ್ಲಿ ಬರುವವರನ್ನು, ಮಹಲುಗಳಲ್ಲಿ ವಾಸಿಸುವವರನ್ನು ಬೆಲೆಬಾಳುವ ಉಡುಪುಗಳನ್ನು ಧರಿಸುವವರನ್ನು ಕಂಡರೆ ನಾವು ಕೆಂಪು ರತ್ನಗಂಬಳಿಯನ್ನು ಹಾಸಿ ಸ್ವಾಗತಿಸುತ್ತೇವೆ. ಅದೇ ಆ ವ್ಯಕ್ತಿಗಳು ಸಾಮಾನ್ಯ ಮನುಷ್ಯರಂತೆ ಜೀವಿಸುತ್ತಿದ್ದರೆ ಅಚ್ಚರಿ ಪಡುತ್ತೇವೆ. ಆದರೆ ಓರ್ವ ಬಡ ವ್ಯಕ್ತಿಯನ್ನು ನಿಕೃಷ್ಟವಾಗಿ ಕಾಣುತ್ತೇವೆ. ಶ್ರೀಮಂತನೇ ಇರಲಿ ಬಡವನೇ ಇರಲಿ ನಾವು ಅವರಲ್ಲಿ ಗುರುತಿಸ ಬೇಕಾಗಿರುವುದು ಅವರಲ್ಲಿರುವ ಒಳ್ಳೆಯ ಗುಣಗಳನ್ನು ಮಾತ್ರ.

ಹೊಲದಲ್ಲಿ ಕೆಲಸ ಮಾಡುವ ರೈತ ಸೂಟು ಬೂಟು ಹಾಕಿಕೊಳ್ಳಲು ಆಗುವುದಿಲ್ಲ, ಆದರೆ ಆತನ ಕೆಲಸಕ್ಕೆ ನಮಗೆಲ್ಲ ಊಟ ನೀಡುವ ಯೋಗ್ಯತೆ ಇದೆ. ಆತನ ಬೆವರಿನ ಫಲವನ್ನು ನಾವು ಉಣ್ಣುತ್ತೇವೆ. ಪರಮೋತ್ಕೃಷ್ಟವಾದ ವೃತ್ತಿ ಆತನದು. ತಾನು ಬೆವರು ಸುರಿಸಿ ಹಗಲಿರುಳು ದುಡಿದು ನಮ್ಮ ಹೊಟ್ಟೆಗೆ ಅನ್ನ ಕಾಣಿಸುವ ರೈತ ಭೂಮಿಯ ಮೇಲಿನ ಭಗವಂತನೇ ಸರಿ. ಆತನ ವ್ಯಕ್ತಿಗೂ ಆತನ ದಿರಿಸಿಗೂ ಯಾವುದೇ ಸಂಬಂಧ ಜೋಡಿಸದಿರಿ.

ಇನ್ನು ಮೆಕ್ಯಾನಿಕ್ ಕೆಲಸ ಮಾಡುವವರು, ರಸ್ತೆಯ ಕಸ ಗುಡಿಸುವ, ಚರಂಡಿಗಳನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರು ಧರಿಸುವ ಬಟ್ಟೆಗಳು ಅವರ ಕೆಲಸಕ್ಕೆ ಬೇಕಾದ ಗಟ್ಟಿಮುಟ್ಟಾದ ಮತ್ತು ಕೊಳೆ ಅಷ್ಟಾಗಿ ಎದ್ದು ಕಾಣಿಸದ ಖಾಕಿ ಇಲ್ಲವೇ ಕಪ್ಪು ನೀಲಿ ಬಣ್ಣದ್ದಾಗಿರುತ್ತವೆ. ಅದೆಷ್ಟೇ ಬಾರಿ ಒಗೆದರೂ ಹರಿಯದ ಗಟ್ಟಿ ಮುಟ್ಟಾದ ಬಟ್ಟೆಗಳು ದೈಹಿಕ ಶ್ರಮದ ಕೆಲಸಗಳನ್ನು ಮಾಡುವವರಿಗೆ ಬೇಕು. ಆದ್ದರಿಂದ ಅವರು ಸಮವಸ್ತ್ರಗಳನ್ನು ತಿಳಿಸುತ್ತಾರೆ, ಹೊರತು ಅವರ ದರ್ಜೆ ಕೆಳಮಟ್ಟದಲ್ಲ.

ಜನರನ್ನು ಅವರು ಹಾಕಿರುವ ದಿರಿಸಿನ ಮೇಲೆ ಗೌರವಿಸದಿರಿ. ಯಾರನ್ನೂ ಅಸಡ್ಡೆ ಮಾಡದಿರಿ. ಯಾವುದೇ ವಿಷಯವನ್ನು ಅನವಶ್ಯಕವಾಗಿ ಎಳೆಯಬೇಡಿ. ಯಾರಿಗೆ ಕಾಯುವ ತಾಳ್ಮೆ ಇರುತ್ತದೆಯೋ ಅವರಿಗೆ ಪಾಠ ಕಲಿಸುವ ಧೈರ್ಯವೂ ಇರುತ್ತದೆ... ಅದು ಕೂಡ ಅತ್ಯಂತ ಪ್ರೀತಿಪೂರ್ವಕವಾಗಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

• Admissions
• Requirements
• Firm Branding
• Public Notice
• Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper

BOOK NOW! Scan to Read

• Obituary
• Remembrance
• Birthday wish ads
• Events Display &
• Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038

**ಕವಿ ಮನಸು**

## ತಾರತಮ್ಯ

ಸಿಗುತ್ತಿಲ್ಲ ಅರ್ಹರಿಗೆ ಸ್ಥಾನಮಾನ
ನುಂಗಿಹರು ನಿಂದೆ ಅಪಮಾನ
ಕೈ ಜಾರಿದೆ ಪಾಲಿನ ಬಹುಮಾನ
ಸಲ್ಲುತ್ತಿಲ್ಲ ನಿಜವಾದ ಸನ್ಮಾನ

ಎಲ್ಲೆಡೆ ಜಾತಿ ವೈಷಮ್ಯ
ಎಲ್ಲಾ ಕ್ಷೇತ್ರದಿ ಇದರದೇ ಪಾರಮ್ಯ
ಎಡೆಬಿಡದೆ ನಡೆಯುತಿದೆ ತಾರತಮ್ಯ
ಮರೀಚಿಕೆಯಾಗಿದೆ ಮುಟ್ಟುವ ಗಮ್ಯ

ಜಾತಿ ತಾರತಮ್ಯವ ಅಳಿಸೋಣ
ಸಮಾನತೆಯ ಎಲ್ಲೆಡೆ ಸಾರೋಣ
ಪ್ರತಿಭೆಗೆ ಮನ್ನಣೆ ನೀಡೋಣ
ಶಾಂತಿಯ ಮಂತ್ರವ ಜಪಿಸೋಣ

– ಚೇತನ ಭಾರ್ಗವ, ಬೆಂಗಳೂರು

# ಮೊರೆರ ಬೆಟ್ಟಗಳನ್ನು ವಿಶ್ವ ಪಾರಂಪರಿಕ ತಾಣಗಳಾಗಲಿವೆ

## ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಹೇಳಿಕೆ | ಹಿರೇಬೆಣಕಲನ ಮೊರೆರ ಬೆಟ್ಟಕ್ಕೆ ಭೇಟಿ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲನ ಮೊರೆರ ಬೆಟ್ಟಗಳನ್ನು ವಿಶ್ವ ಪಾರಂಪರಿಕ ತಾಣಗಳನ್ನಾಗಿ ಮಾಡಲಾಗುವುದು ಎಂದು ಕಾನೂನು. ನ್ಯಾಯ. ಮಾನವ ಹಕ್ಕುಗಳು. ಸಂಸದೀಯ ವ್ಯವಹಾರ. ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ. ಪಾಟೀಲ್ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲೆಯ ನಮ್ಮ ಸ್ಮಾರಕ ದರ್ಶನ ಮತ್ತು ಸ್ಮಾರಕಗಳ ಸಂರಕ್ಷಣೆಯ ಪ್ರವಾಸದ ಅಂಗವಾಗಿ ಗಂಗಾವತಿ ತಾಲ್ಲೂಕಿನ ಹಿರೇಬೆಣಕಲನ ಮೊರೆರ ಬೆಟ್ಟಕ್ಕೆ ಭೇಟಿ ನೀಡಿ ವೀಕ್ಷಣೆ ನಂತರ ಪತ್ರಕರ್ತರಿಗೆ ಮಾಹಿತಿ ನೀಡಿ ಮಾತನಾಡಿದರು. ಹಿರೇಬೆಣಕಲ್ ಮೊರೆರ ಬೆಟ್ಟಗಳು ನಮ್ಮ ರಾಷ್ಟ್ರದಲ್ಲಿಯೆ ಪ್ರಾಗೈತಿಹಾಸಿಕ ಸ್ಥಳಗಳಾಗಿದ್ದು, ಇವುಗಳು 5 ರಿಂದ 6 ಸಾವಿರ ವರ್ಷಗಳ ಇತಿಹಾಸ ಹೊಂದಿವೆ. ಇಂತಹ ಸ್ಥಳಗಳು ನಮ್ಮ ದೇಶದಲ್ಲಿ ಎರಡು ಕಡೆ ಮಾತ್ರ ಇದ್ದು ಮೇಘಾಲಯ ರಾಜ್ಯದಲ್ಲಿ ಬಿಟ್ಟರೆ ಅದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿರುವ ಮೊರೆರ ಬೆಟ್ಟಗಳು. ಇವು ಆದಿಮಾನ ವರು ವಾಸವಾಗಿದ್ದ ಸ್ಥಳಗಳಾಗಿವೆ ಎಂದು ಹೇಳಿದರು.

ಹಿರೇಬೆಣಕಲ್ ಮೋರೆರ ಬೆಟ್ಟಗಳನ್ನು ವಿಶ್ವಪಾರಂಪರಿಕ ತಾಣವಾಗಲು ಏನು ಮಾಡಬೇಕು. ಹೇಗೆ ಮಾಡಬೇಕು ಎಂಬ ಯೋಜನೆ ಆದಷ್ಟು ಬೇಗನೆ ರೂಪಿಸುವುದರ ಜೊತೆಗೆ ಅದರ ರಕ್ಷಣೆ ಹಾಗೂ ಆಕರ್ಷಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಧ್ಬುತವಾದ ಐತಿಹಾಸಿಕ ಸ್ಥಳಗಳು ನೋಡಸಿಗುತ್ತವೆ. ನಮ್ಮ ಇಲಾಖೆಯಿಂದ ಪ್ರಾಚ್ಯ ವಸ್ತುಗಳು ಹಾಗೂ ಸ್ಮಾರಕಗಳನ್ನು ಸಂರಕ್ಷಣೆ ಜೊತೆಗೆ ಅವುಗಳ



ಇತಿಹಾಸವನ್ನು ಮುಂದಿನ ಜನಾಂಗಕ್ಕೆ ತಿಳಿಸುವ ಕೆಲಸವನ್ನು ಮಾಡಲಾಗುತ್ತಿದೆ. ಸ್ಮಾರಕಗಳನ್ನು ದತ್ತು ಪಡೆಯಲು ಸಾರ್ವಜನಿಕರು ಮುಂದೆ ಬಂದರೆ ಅವರಿಗೆ ದತ್ತು ಕೊಡುವ ಕೆಲಸವನ್ನು ಮಾಡಲಾಗುತ್ತಿದೆ ಎಂದು ಹೇಳಿದರು.

ಹಿರೇಬೆಣಕಲನಲ್ಲಿ ಆದಿಮಾನವರು ವಾಸಿಸಿದ ಡಾಲಮಿನ್ಸ್ ಅಂದರೆ ಗದ್ದುಗೆಗಳು. ಅವರ ಸಮಾಧಿಗಳು. ಅವರು ಸುಮಾರು 5 ಸಾವಿರ ವರ್ಷಗಳ ಹಿಂದೆ ಬಿಡಿಸಿದ ಚಿತ್ರಗಳು ಗುಡ್ಡದಲ್ಲಿ ಇಂದು ಉಳಿಯಬೇಕಾದರೆ ಎಂತಹ ಬಣ್ಣ ಉಪಯೋಗ ಮಾಡಿರಬೇಕು. ಇಂದು ನಾವು ಎಂತಹ ಚಿತ್ರ ಬಿಡಿಸಿದರು ನೂರು ವರ್ಷ ಉಳಿಯುವದಿಲ್ಲ ಎಂದರು.

ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿ ಹಿರೇಬೆಣಕಲ್ ಮೊರೆರ ಬೆಟ್ಟದ ಪ್ರಾಗೈತಿಹಾಸಿಕ ಸ್ಥಳಗಳ ಕುರಿತಾಗಿ ಆಗಸ್ಟ್ ತಿಂಗಳ ಒಳಗಾಗಿ ವಸ್ತು ಪ್ರದರ್ಶನ ಏರ್ಪಡಿಸುವಂತೆ ಪುರಾತತ್ವ. ಸಂಗ್ರಹಾಲಯಗಳು ಮತ್ತು ಪಾರಂಪರಿಕ ಇಲಾಖೆಯ ಆಯುಕ್ತರಿಗೆ ಸಚಿವರು ಸೂಚನೆ ನೀಡಿದರು. ಮೊರೆರ ಬೆಟ್ಟಗಳನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸುವದಕ್ಕೆ ಸಂಬಂಧಿಸಿದಂತೆ ಇಂಟ್ಯಾಕ್ ಸಂಸ್ಥೆಯವರಿಗೆ ಯೋಜನೆ ರೂಪಿಸಲು ಜವಾಬ್ದಾರಿ ನೀಡಲಾಗಿದೆ ಎಂದರು.

ಇಂತಹ ಸ್ಥಳಗಳ ಬಗ್ಗೆ ಜಪಾನ್, ಜರ್ಮನಿಯವರಿಗೆ ಮಾಹಿತಿ ನೀಡಿದರೆ ಅವರು 5 ರಿಂದ 6 ತಿಂಗಳಲ್ಲಿ ಇಲ್ಲಿಗೆ ಬಂದು ಬಿಡುತ್ತಾರೆ ಅವರ ಸ್ವಭಾವ ವೈಜ್ಞಾನಿಕ ಮನೋಭಾವದಾಗಿದೆ. ಹಿರೇಬೆಣಕಲ್ ಮೊರೆರ ಬೆಟ್ಟಗಳನ್ನು ಜಾಗತಿಕವಾಗಿ ವಿಶ್ವ ಪಾರಂಪರಿಕ ಸ್ಥಳವನ್ನಾಗಿ ಮಾಡಲು ನಮ್ಮ ಸರ್ಕಾರ ದೃಢ ಹೆಜ್ಜೆ ಇಡಲಿದೆ. ಆದಷ್ಟು ಬೇಗನೆ ಕೊಪ್ಪಳ ಜಿಲ್ಲೆಯಲ್ಲಿ ಪ್ರಾಚ್ಯವಸ್ತು ಇಲಾಖೆಯ ಕಛೇರಿಯನ್ನು ಆರಂಭಿಸಲಾಗುವುದು ಎಂದು ಹೇಳಿದರು.

ಇತಿಹಾಸಕಾರರಾದ ಶರಣಬಸಪ್ಪ ಕೋಳ್ಕರ್ ಅವರು ಮೊರೆರ ಬೆಟ್ಟದ ಕುರಿತು ಸಚಿವರಿಗೆ ಮಾಹಿತಿ ನೀಡಿ ಮಾತನಾಡಿ ಆದಿಮಾನವರು ಜೀವಿಸಿದ ಕುರುವುಗಳು ಹಿರೇಬೆಣಕಲ್ ಮೊರೆರ ಬೆಟ್ಟಗಳಲ್ಲಿ ಸಿಗುತ್ತವೆ. ಇವರ ಅವಧಿಯಲ್ಲಿ ಕಬ್ಬಿಣವನ್ನು ಕಂಡು ಹಿಡಿದ ಕಾರಣ ಇದನ್ನು ಕಬ್ಬಿಣದ ಯುಗ ಎಂದು ಕರೆಯಲಾಗುತ್ತದೆ. ಕ್ರಿ.ಪೂ. 3 ಸಾವಿರ ವರ್ಷಗಳ ಹಿಂದೆ ಮೊರೆರ ಬುಡಕಟ್ಟು ಜನರು ಇಲ್ಲಿ ವಾಸಿಸುತ್ತಿದ್ದರು. ಈ ಜನಾಂಗ ಪುನರ್ ಜನ್ಮದಲ್ಲಿ ನಂಬಿಕೆ ಉಳ್ಳವರಾಗಿದ್ದರು. ಇವರು ಸತ್ತವರಿಗಾಗಿ ದೊಡ್ಡ- ದೊಡ್ಡ ಸಮಾಧಿಗಳನ್ನು ಕಟ್ಟಿಸಿದ್ದರು. ಇಲ್ಲಿ ಈ ಹಿಂದೆ 500 ಇದ್ದ ಮೋರೆರ ಸಮಾಧಿಗಳು ಈಗ 100 ರಿಂದ 200 ಉಳಿದಿವೆ. ಇದು ಯುನೆಸ್ಕೋ ತಾತ್ಕಾಲಿಕ ಪಟ್ಟಿಯಲ್ಲಿ ಈ ಹಿಂದೆ ಎರಡು ಸಲ ಸೇರ್ಪಡೆಯಾಗಿತ್ತು. ಬೇಟೆಗಾರಿಕೆ ಪಶುಪಾಲನೆ ಸೇರಿದಂತೆ ಇತರೆ ಹಲವಾರು ಚಿತ್ರಗಳನ್ನು ಅವರು ಬಿಡಿಸಿರುವುದು ಗುಹೆಗಳಲ್ಲಿ ಇಂದು ಕಾಣಸಿಗುತ್ತವೆ ಎಂದು ಸಚಿವರಿಗೆ ಮಾಹಿತಿ ನೀಡಿದರು.

ಮಾಜಿ ಸಚಿವರಾದ ಅಮರೇಗೌಡ ಬಯ್ಯಾಪುರ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಚ್. ಆರ್. ಶ್ರೀನಿವಾಸ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಪುರಾತತ್ವ. ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ದೇವರಾಜ, ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರಾದ ನಾಗರಾಜ ಸೇರಿದಂತೆ ಇತರೆ ಅಧಿಕಾರಿಗಳು ಹಿರೇಬೆಣಕಲ್ ಗ್ರಾಮಸ್ಥರು ಇದ್ದರು.

## ಅಂಗವಿಕಲರ ಪುನರ್ವಸತಿ ಕೇಂದ್ರ ಆರಂಭಿಸಲು ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ಆಹ್ವಾನ.

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರವನ್ನು ಆರಂಭಿಸಲು ಅರ್ಹ ಭಾರತೀಯ ರೆಡ್ ಕ್ರಾಸ್, ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ಸ್ವಯಂ ಸೇವಾ ಸಂಸ್ಥೆ ಮತ್ತು ವೈದ್ಯಕೀಯ ಕಾಲೇಜುಗಳಿಂದ ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿ ತಿಳಿಸಿದ್ದಾರೆ.

ಆಸಕ್ತಿಯುಳ್ಳ ಸಂಸ್ಥೆಯವರು ಜೂ.17 ರಿಂದ 30ರೊಳಗಾಗಿ ಭರ್ತಿ ಮಾಡಿದ ಅರ್ಜಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಟಿಟಿಸಿ : ತರಬೇತಿಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಸಂಸ್ಥೆಯ ಬಹುಕೌಶಾಲ್ಯಾಭಿವೃದ್ಧಿ ಕೇಂದ್ರವು ನೂತನವಾಗಿ ಪ್ರಾರಂಭವಾಗಿದ್ದು, ತರಬೇತಿಗಾಗಿ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹತ್ತನೇ ತರಗತಿ ಉತ್ತೀರ್ಣ ಮತ್ತು ಅನುತ್ತೀರ್ಣರಾದ ಯುವಕರಿಗೆ 'ಟೂಲರೂಮ್ ಮಶಿನಿಸ್ಟ್' ತಾಂತ್ರಿಕ ವೃತ್ತಿ ತರಬೇತಿಗೆ ಪ್ರವೇಶಾತಿ ಪ್ರಾರಂಭವಾಗಿದೆ. ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ನೀಡಲಾಗುತ್ತದೆ.

ತರಬೇತಿ ಹೊಂದಿದ ಅಭ್ಯರ್ಥಿಗಳಿಗೆ ಕೈಗಾರಿಕೆಗಳಲ್ಲಿ ಹೆಚ್ಚಿನ ಬೇಡಿಕೆಯಿದ್ದು, ಒಂದೇ ಕೋರ್ಸಿನಲ್ಲಿ ಟರ್ನರ್, ಮಿಲ್ಲರ್, ಗ್ರೈಂಡರ್, ಸಿಎನ್‌ಸಿ, ಕ್ಯಾಡ್-ಕ್ಯಾಮ್ ಮತ್ತು ಟೂಲ್ ಆಂಡ್ ಡೈ ಮೇಕಿಂಗ್ ಟ್ರೇಡ್‌ಗಳಲ್ಲಿ ಆನ್ ದಿ ಜಾಬ್ ತರಬೇತಿ ನೀಡುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಉದ್ಯೋಗಾವಕಾಶಗಳು ದೊರಕುತ್ತವೆ. ಜೊತೆಗೆ ಆಟೋಕ್ಯಾಡ್, ಕನ್ನಡ ಮತ್ತು ಇಂಗ್ಲಿಷ್ ಭಾಷಾ ಕೌಶಲ್ಯ ಹಾಗೂ ಉದ್ಯೋಗ ಕೌಶಲ್ಯಗಳನ್ನು ಕಲಿಸಲಾಗುತ್ತದೆ.

ಜಿಟಿಟಿಸಿ ಸಂಸ್ಥೆಯು ಉನ್ನತ ತಂತ್ರಜ್ಞಾನ ಮತ್ತು ತರಬೇತಿ ಸೌಲಭ್ಯಗಳನ್ನು ಅಳವಡಿಸಿಕೊಂಡಿದ್ದು, ಕೈಗಾರಿಕೆಗಳಲ್ಲಿ ಅನುಭವ ಹೊಂದಿದ ಶಿಕ್ಷಕರನ್ನು ಹೊಂದಿದೆ. ತರಬೇತಿಯ ನಂತರ ವಿದ್ಯಾರ್ಥಿಗಳಿಗೆ ಟೂಲಿಂಗ್, ವಿಮಾನ ತಯಾರಿಕೆ, ಮತ್ತು ಆಟೊಮೊಬೈಲ್ ವಲಯಗಳ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸಿ ಕೊಡಲಾಗುವುದು.

ಸರ್ಕಾರದ ವಿವಿಧ ಯೋಜನೆಯಡಿ "ಮೆಕ್ಯಾನಿಕಲ್ ಕ್ಯಾಡ್/ಕಾಮ್", "ಎಲೆಕ್ಟ್ರಾನಿಕ್ಸ್-ಆಟೋಮೇಶನ್ ಮನೆ/ಕೈಗಾರಿಕೆ, ಪಿ.ಎಲ್.ಸಿ ಪ್ರೋಗ್ರಾಮಿಂಗ್, ಅಡ್ವಾನ್ಸ್ ಹೈಡ್ರಾಲಿಕ್ಸ್ ಮತ್ತು ನ್ಯೂಮ್ಯಾಟಿಕ್ಸ್", "ಎಲೆಕ್ಟ್ರಿಕಲ್- ಮನೆ/ಕೈಗಾರಿಕೆ ಇನ್ಸ್ಟಾಲೇಷನ್, ಸಿಕ್ಯಾಡ್ ಮತ್ತು ಕಂಪ್ಯೂಟರ್ ಸೈನ್ಸ್ - ಕಂಪ್ಯೂಟರ್ ಅಪ್ಲಿಕೇಷನ್ ವಿಭಾಗದ ಉಚಿತ ಮತ್ತು ಪಾವತಿ ತಾಂತ್ರಿಕ ಕೌಶಲ್ಯ ಅಲ್ಪಾವಧಿತರಬೇತಿಗಳನ್ನುಪ್ರಾರಂಭಿಸಲಾಗುತ್ತಿದೆ.

ಕನಿಷ್ಠ 8ನೇ ತರಗತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ, ಬಿ.ಇ ಉತ್ತೀರ್ಣರಾದ 16 ರಿಂದ 35 ವಯೋಮಿತಿಯೊಳಗಿನ ಅಭ್ಯರ್ಥಿಗಳು ತರಬೇತಿ ಪಡೆಯಲು ಅರ್ಹರು. ತರಬೇತಿ ಪಡೆಯಲು ಆದಾಯದ ಮಿತಿ ಇರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಗರದ ಕಂಟೋನ್‌ಮೆಂಟ್ ನ ಐಶ್ವರ್ಯ ಕಾಲೋನಿಯ ಸರ್ಕಾರಿ ಉಪ ಕರಣಾಗಾರ ಮತ್ತು ತರಬೇತಿ ಕೇಂದ್ರ (ಐ.ಟಿ.ಐ. ಕ್ಯಾಂಪಸ್) ಅಥವಾ ಮೊ.9972320076, 9620057086 ಗೆ ಸಂಪರ್ಕಿಸಬಹುದು ಎಂದು ಜಿಟಿಟಿಸಿಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೈಟೆಕ್ ಪ್ರವಾಸಿ ಮಂದಿರ



**ಮೊದಲ ಪುಟದಿಂದ**

ಗ್ರಾಮದ ರಸ್ತೆ ಮಾರ್ಗಕ್ಕೆ ಅಂದಾಜು 2 ಕೋಟಿ ರೂಗಳ ಅನುದಾನ ನೀಡಬೇಕು ಎಂದರು.

ಮರಿಯಮ್ಮನಹಳ್ಳಿ-ಶಿವಮೊಗ್ಗ ಪಿಪಿಪಿ ರಸ್ತೆ; ಮರಿಯಮ್ಮನಹಳ್ಳಿ-ಹಗರಿಬೊಮ್ಮನಹಳ್ಳಿ-ಹರಪನಹಳ್ಳಿ-ಹರಿಹರ-ಮಲೇಬೆನ್ನೂರು-ಶಿವಮೊಗ್ಗ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಕೆಲಸವನ್ನು ಕೇಂದ್ರ ಕೈಬಿಟ್ಟ ಕಾರಣ ಪ್ರಸ್ತುತ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿರುವುದರಿಂದ ಇದನ್ನು ಖಾಸಗಿ ಸಹಭಾಗಿತ್ವದಲ್ಲಿ ರಸ್ತೆ ಅಭಿವೃದ್ಧಿ ಮಾಡಿ ಶುಲ್ಕ ಸಂಗ್ರಹಿಸುವ ಖಾಸಗಿಯವರಿಂದ ನಿರ್ಮಾಣ ಮಾಡಲು ಟೆಂಡರ್ ಕರೆಯಲಾಗಿದೆ. 12 ರಾಜ್ಯಗಳಲ್ಲಿ ಟೆಂಡರ್ ಕರೆಯಲಾಗಿದ್ದು ಟೆಂಡರ್ ಅಂತಿಮವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಈ ರಸ್ತೆಯನ್ನು ಅಭಿವೃದ್ಧಿ ಮಾಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಎನ್.ಹೆಚ್.ಎ.ಐ ಮತ್ತು ಜಿಲ್ಲಾಧಿಕಾರಿಗಳ ಸಭೆಗೆ ಶಾಸಕರಿಗೆ ಆಹ್ವಾನ; ರಸ್ತೆ, ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಮತ್ತು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ನಡೆಯುವ ಉನ್ನತ ಮಟ್ಟದ ಅಧಿಕಾರಿಗಳ ಸಭೆಗೆ ಸಮಸ್ಯೆಗಳಿರುವ ಶಾಸಕರನ್ನು ಆಹ್ವಾನಿಸಲಾಗುತ್ತದೆ. ಅಲ್ಲಿ ಉನ್ನತ ಮಟ್ಟದ ಅಧಿಕಾರಿಗಳಿರುವುದರಿಂದ ಸಮಸ್ಯೆಗಳನ್ನು ನಿವಾರಣೆ ಮಾಡಲಾಗುತ್ತದೆ ಎಂದರು.

ಶಾಸಕರಾದ ಹೆಚ್.ಆರ್.ಗವಿಯಪ್ಪ ಮಾತನಾಡಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲವು ಕಡೆ ಸೇವಾ ರಸ್ತೆಗಳಿಲ್ಲದ ಕಾರಣ ದ್ವಿಚಕ್ರವಾಹನದಲ್ಲಿ ತಿರುಗಾಡುವ ಹೆಚ್ಚಿನ ಕಾರ್ಮಿಕರು ಅಪಘಾತದಲ್ಲಿ ಮರಣಹೊಂದಿದ್ದಾರೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸೇವಾರಸ್ತೆಗಳನ್ನು ನಿರ್ಮಿಸಬೇಕು. ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದಲ್ಲಿ ನ್ಯಾಯಾಲಯ ನಿರ್ಮಾಣಕ್ಕೆ 10 ಎಕರೆ ಜಾಗ ನೀಡಿದ್ದು ಇದರ ನಿರ್ಮಾಣಕ್ಕೆ ಅನುದಾನ ಒದಗಿಸಬೇಕೆಂದು ಮನವಿ ಮಾಡಿದರು.ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ್, ಹಡಗಲಿ ಶಾಸಕರಾದ ಕೃಷ್ಣನಾಯ್ಕ್ ಅವರು ರಾಜ್ಯ ಹಾಗೂ ಜಿಲ್ಲಾ ರಸ್ತೆಗಳು ಹಾಳಾಗಿದ್ದರಿಂದ ಹೆಚ್ಚಿನ ಅನುದಾನ ನೀಡಲು ಮನವಿ ಮಾಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಲೋಕೋಪಯೋಗಿ ಇಲಾಖೆ ಮುಖ್ಯ ಇಂಜಿನಿಯರ್ ಶರಣಪ್ಪ ಸೂಲಗುಂಟಿ, ಅಧೀಕ್ಷಕ ಇಂಜಿನಿಯರ್ ಅಮೀನ್ ಮುಕ್ತಾರ್, ಕಾರ್ಯನಿರ್ವಾಹಕ ಇಂಜಿನಿಯರ್ ದೇವದಾಸ್ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

## ಸರ್ಕಾರಿ ಪಾಲಿಟೆಕ್ನಿಕ್ ಡಿಪ್ಲೋಮಾ ಪ್ರಥಮ ವರ್ಷಕ್ಕೆ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2025-26ನೇ ಸಾಲಿಗೆ ಪೋಸ್ಟ್ ಡಿಪ್ಲೋಮಾ ಇಂಡಸ್ಟ್ರಿಯಲ್ ಸೇಫ್ಟಿ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್ ಪ್ರವೇಶಾತಿಗೆ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಕಾಲೇಜಿನಲ್ಲಿ ಪಡೆದುಕೊಂಡು ಭರ್ತಿ ಮಾಡಿದ ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಇದೇ ಪಾಲಿಟೆಕ್ನಿಕ್ ಕಾಲೇಜ್‌ನ ಪ್ರಾಂಶುಪಾಲರ ಕಚೇರಿಗೆ ಜೂನ್ 25 ಸಂಜೆ 05 ಗಂಟೆಯೊಳಗೆ ಸಲ್ಲಿಸಬಹುದು.

ಜೂನ್ 26 ರಂದು ಬೆಳಿಗ್ಗೆ 11 ಗಂಟೆಗೆ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟ, ಅಂದು ಸಂಜೆ 03 ರ ವರೆಗೆ ತಿದ್ದುಪಡಿಗೆ ಅವಕಾಶ, ಸಂಜೆ 05 ಗಂಟೆಯವರೆಗೆ ಅಂತಿಮ ಮೆರಿಟ್ ಪಟ್ಟಿ ಪ್ರಕಟಿಸಲಾಗುವುದು. ಜೂನ್ 27 ರಿಂದ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ನ ಪ್ರಾಚಾರ್ಯರ ಕಚೇರಿ ಅಥವಾ ದೂ.08392-242228 ಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ತಿಳಿಸಿದ್ದಾರೆ.

# ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಬೆಳೆವಿಮೆಗಾಗಿ ರೈತರು ನೋಂದಾಯಿಸಿ

**ಹಂಪಿ ಟೈಮ್ಸ್ ಕೊಪ್ಪಳ**

2025-26ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬೀಮಾ ಯೋಜನೆಯನ್ನು ಮುಂಗಾರು ಹಂಗಾಮಿನಲ್ಲಿ ಅನುಷ್ಠಾನಗೊಳಿಸ ಲಾಗುತ್ತಿದ್ದು, ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ರೈತರ ಬೆಳೆವಿಮೆ ನೊಂದಾಯಿಸಿಕೊಳ್ಳುವಂತೆ ಕೊಪ್ಪಳ ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್ ರುದ್ರೇಶಪ್ಪ ಅವರು ತಿಳಿಸಿದ್ದಾರೆ.

ನೀರಾವರಿ ಹತ್ತಿ ಮತ್ತು ಮಳೆಯಾಶ್ರಿತ ಹೆಸರು ಬೆಳೆಗಳಿಗೆ ನೋಂದಾಯಿಸಲು ಜುಲೈ 15 ಹಾಗೂ ಇತರೆ ಅಧಿಸೂಚಿತ ಎಲ್ಲಾ ಬೆಳೆಗಳಿಗೆ ನೋಂದಾಯಿಸಲು ಜುಲೈ 31 ಕೊನೆಯ ದಿನವಾಗಿರುತ್ತದೆ. ರೈತರು ಬೆಳೆವಿಮೆ ನೋಂದಾಯಿಸಿ ಬೆಳೆವಿಮೆ ಪರಿಹಾರ ಲಾಭ ಪಡೆಯಬೇಕು. ರೈತರು ಕಡ್ಡಾಯವಾಗಿ ಎಫ್‌ಐಡಿ ಯನ್ನು ಹೊಂದಿರಬೇಕು. ರೈತರು ಬಿತ್ತನೆ ಮಾಡುವ ಬೆಳೆಯನ್ನೆ ನೋಂದಾಯಿಸಬೇಕು ಮತ್ತು ತಮ್ಮ ಬೆಳೆಯನ್ನು ತಾವೇ ಖುದ್ದಾಗಿ ಬೆಳೆ ಸಮೀಕ್ಷೆಯನ್ನು ಮಾಡಬೇಕು. ರೈತರು ತಮ್ಮ ದಾಖಲಾತಿಗಳಾದ ಪಹಣಿ, ಆಧಾರಕಾರ್ಡ ಮತ್ತು ಬ್ಯಾಂಕ್ ಪಾಸ್ ಬುಕ್ ಜರಾಕ್ಸ ಇನ್ನೊಬ್ಬರಿಗೆ ಯಾವುದೇ ಕಾರಣಕ್ಕೂ ನೀಡಬಾರದು. ತಾವೇ ಖುದ್ದಾಗಿ ಬೆಳೆವಿಮೆ ನೋಂದಾಯಿಸಬೇಕು. ಒಂದು ವೇಳೆ ಬೇರೆ ರೈತರ ದಾಖಲಾತಿಗಳನ್ನು ಉಪಯೋಗಿಸಿಕೊಂಡು ಬೆಳೆವಿಮೆ ವಿಮೆ ನೋಂದಾ ಯಿಸಿದ್ದು, ಕಂಡು ಬಂದರೆ ಅಂತವರ ವಿವರಗಳನ್ನು ಕೂಡಲೇ ಕೃಷಿ ಇಲಾಖೆಗೆ ತಿಳಿಸಲು ಸೂಚಿಸಿದೆ.

ಅಧಿಸೂಚಿತ ಬೆಳೆಗಳ ವಿವರ: ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಧಿಸೂಚಿತ ಬೆಳೆಗಳ ವಿವರ ಇಂತಿದೆ. ಗಂಗಾವತಿ ತಾಲ್ಲೂಕಿನ ನೀರಾವರಿ ಭತ್ತ, ಕೊಪ್ಪಳ ಮತ್ತು ಕುಷ್ಟಗಿ ತಾಲ್ಲೂಕಿನ ಮಳೆಯಾಶ್ರಿತ ಮುಸಕಿನಜೋಳ ಹಾಗೂ ಸಜ್ಜೆ, ಯಲಬುರ್ಗಾ ತಾಲ್ಲೂಕಿನ ಮಳೆಯಾಶ್ರಿತ ಹೆಸರು & ಮುಸುಕಿನಜೋಳ ಬೆಳೆ ಸೇರಿದೆ.

ಹೋಬಳಿ ಮಟ್ಟದಲ್ಲಿ ಅಧಿಸೂಚಿತ ಬೆಳೆಗಳಾದ ಮಳೆಯಾಶ್ರಿತ ಅಥವಾ ನೀರಾವರಿ ಬೆಳೆಗಳಾದ ಭತ್ತ, ಜೋಳ, ಮುಸಕಿನ ಜೋಳ, ಸಜ್ಜೆ, ಸೂರ್ಯಕಾಂತಿ, ತೊಗರಿ, ನಲೆಗಡಲೆ (ಶೇಂಗಾ), ಹತ್ತಿ, ಈರುಳ್ಳಿ, ಹಾಗೂ ಮಳೆಯಾಶ್ರಿತ ಅಲಸಂದಿ, ನವಣೆ, ಹೆಸರು, ಹುರಳಿ, ಎಳ್ಳು ಬೆಳೆ ಮತ್ತು ಟಮೆಟೊ ಬೆಳೆ ಈ ಯೋಜನೆಯಡಿ ಒಳಗೊಂಡಿದೆ.

ಪ್ರಸಕ್ತ ಸಾಲಿಗೆ ಟಾಟಾ ಎಐಜಿ ಇನ್ಸೂರೇನ್ಸ ಕೋ ಲೀಮಿಟೆಡ್ ಆಯ್ಕೆಯಾಗಿದ್ದು, ರೈತರು ಹೆಚ್ಚಿನ ಮಾಹಿತಿಗಾಗಿ ಇನ್ಸೂರೇನ್ಸ ಕಂಪನಿಯ ಪ್ರತಿನಿಧಿ ಅಥವಾ ಟೋಲ್ ಫ್ರೀ ನಂಬರ-18002093536 ಅಥವಾ ಹತ್ತಿರದ ರೈತ ಸಂಪರ್ಕ ಕೇಂದ್ರ, ಸಾಮಾನ್ಯ ಸೇವಾ ಕೇಂದ್ರ, ಗ್ರಾಮ್ ಒನ್ ಅಥವಾ ಸಂಬಂಧಪಟ್ಟ ಬ್ಯಾಂಕ್ ಶಾಖೆಗೆ ಸಂಪರ್ಕಿಸುವಂತೆ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಪ್ರಕಟಣೆ ತಿಳಿಸಿದೆ

**ಸುತ್ತ ಮುತ್ತ ಕುಂದು-ಕೊರತೆ**

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ? ಹಾಗಾದರೆ ಕೂಡಲೇ ಫೋಟೋ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ 9448633038 ವಾಟ್ಸಪ್ ನಂಬರ್ ಗೆ ಕಳುಹಿಸಿ.

**14 ಭಾಷೆಗಳಲ್ಲಿ ಸುದ್ದಿ**
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

DC & SSLC TOPER TALK
scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ
(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**18–06–2025 – ಬುಧವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂ.ಭಾದ್ರಪದ |
| ಯೋಗ | : ಪ್ರೀತಿ |
| ಕರಣ | : ಆಯುಷ್ಮಾನ್ |
| ಸೂರ್ಯೋದಯ | : 05:42:42 |
| ಸೂರ್ಯಾಸ್ತ | : 19:13:37 |
| ರಾಹು ಕಾಲ | : 12:28–14:10 |
| ಯಮಘಂಡ ಕಾಲ | : 07:24–09:05 |
| ಗುಳಿಕ ಕಾಲ | : 10:47–12:28 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 17–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1605.27 ಅಡಿ |
| ಒಳ ಹರಿವು | 14621 ಕ್ಯುಸೆಕ್ |
| ಹೊರ ಹರಿವು | 160 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 29.145 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1582.97 ಅಡಿ |
| ಒಳ ಹರಿವು | 944 ಕ್ಯುಸೆಕ್ |
| ಹೊರ ಹರಿವು | 1244 ಕ್ಯುಸೆಕ್ |
| ಸಾಮರ್ಥ್ಯ | 6.070 ಟಿಎಂಸಿ |

## ಮೈಕ್ರೋ ನ್ಯೂಸ್

### ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರದ ವತಿಯಿಂದ 2025ನೇ ಸಾಲಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
2025ರ ಜುಲೈ 31 ಕ್ಕೆ ಅನ್ವಯವಾಗುವಂತೆ 05 ವರ್ಷ ಮೇಲ್ಪಟ್ಟ ಹಾಗೂ 18 ವರ್ಷದೊಳಗಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ(ಧೈರ್ಯ ಮತ್ತು ಸಾಹಸದಿಂದ ಇತರರನ್ನು ರಕ್ಷಿಸಿದ, ಕ್ರೀಡೆ, ಸಮಾಜ ಸೇವೆ, ತಂತ್ರಜ್ಞಾನ, ಪರಿಸರ ಸಂಸರಕ್ಷಣೆ, ಕಲೆ, ಸಂಸ್ಕೃತಿ ಮತ್ತು ನೂತನ ಆವಿಷ್ಕಾರಗಳು) ಎಲ್ಲಾ ಮಕ್ಕಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು.
ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದ್ದು, ಜಾಲತಾಣ https://awards.gov.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

EVENT
Media
Coverage
Call us
94486 33038

# ಮಕ್ಕಳ ಆರೈಕೆಯಲ್ಲಿ ನಿರ್ಲಕ್ಷ್ಯ ಸಲ್ಲದು

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅಧಿಕಾರಿಗಳಿಗೆ ಸೂಚನೆ



**ಹಂಪಿ ಟೈಮ್ಸ್ ಹೊಸಪೇಟೆ**
ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಮಂಗಳವಾರ ನಗರದ ಉಪ ವಿಭಾಗ ಸಾರ್ವಜನಿಕ ಆಸ್ಪತ್ರೆ ಮತ್ತು ತಾಯಿ ಮತ್ತು ಮಗು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.
ಈ ಸಂದರ್ಭದಲ್ಲಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಪೌಷ್ಟಿಕತೆ ಯಿಂದ ಬಳಲುತ್ತಿರುವ ಮಕ್ಕಳನ್ನು ಕಂಡು ಶಶಿಧರ ಕೋಸಂಬೆ ತೀವ್ರ ಬೇಸರ ವ್ಯಕ್ತಪಡಿಸಿದರು. ಮಕ್ಕಳ ಆರೋಗ್ಯದ ಸ್ಥಿತಿಗತಿಯ ಬಗ್ಗೆ ಮಾಹಿತಿ ಪಡೆದ ಅವರು, ಈ ಕುರಿತು ಆಸ್ಪತ್ರೆಯ ವೈದ್ಯಾಧಿಕಾರಿ ಗಳನ್ನು ತರಾಟೆಗೆ ತೆಗೆದುಕೊಂಡರು.
ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೂ, ರಾಷ್ಟ್ರೀಯ ಬಾಲ್ಯ ಸ್ವಾಸ್ಥ್ಯ ತಂಡ ನೀಡಿದ ವರದಿಗೂ ಸರಿಯಾಗಿ ತಾಳೆಯಾಗುತ್ತಿಲ್ಲ. ಅಧಿಕಾರಿಗಳು ಇದಕ್ಕೆ ಸಂಬಂಧ ವಿಲ್ಲವೆಂಬಂತೆ ವರ್ತಿಸುವುದು ಸರಿಯಲ್ಲ. ಕೂಡಲೆ ಅಪೌಷ್ಟಿಕತೆ ನಿವಾರಣೆಗೆ ಕ್ರಮಕೈಗೊಳ್ಳಬೇಕು.
ಅಪೌಷ್ಟಿಕತೆ ಪ್ರಕರಣಗಳ ನಿರ್ವಹಣೆ ಮತ್ತು ತಡೆಗಟ್ಟುವಿಕೆಗೆ ಸಂಬಂಧಿಸಿ ದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರವಾದ ಮಾಹಿತಿ ನೀಡುವಂತೆ ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಸರ್ಕಾರದ ಸೌಲಭ್ಯ ಗಳನ್ನು ಸಮರ್ಪ ಕವಾಗಿ ಜನರಿಗೆ ತಲುಪಿಸುವಲ್ಲಿ ಅಧಿಕಾರಿಗಳು ಎಡವುತಿದ್ದೀರಿ. ವಿದ್ಯುತ್ ಸಂಪರ್ಕ ವಿದ್ದರೂ ಎಸಿ ಆಫ್ ಮಾಡಿದ್ದೀರಿ ಏಕೆ ? ಆರೋಗ್ಯ ಸೇವೆಗಳ ಗುಣಮಟ್ಟ, ಮಕ್ಕಳ ಪೋಷಣೆ ಮತ್ತು ಅಗತ್ಯ ಸೌಲಭ್ಯಗಳ ಕುರಿತು ಆಯೋಗವು ಗಂಭೀರವಾಗಿ ಪರಿಗಣಿಸಿದ್ದು, ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿ, ಮಕ್ಕಳ ಆರೋಗ್ಯದ ರಕ್ಷಣೆ ಹಾಗೂ ಪೌಷ್ಟಿ ಕಾಂಶದ ಕೊರತೆಯನ್ನು ನಿವಾರಿಸಲು ಆಸ್ಪತ್ರೆ ಆಡಳಿತ ಮಂಡಳಿ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅವರು ಒತ್ತಿ ಹೇಳಿದರು. ಈ ಭೇಟಿಯ ಸಂದರ್ಭದಲ್ಲಿ ಆಯೋ ಗದ ಇತರ ಸದಸ್ಯರು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ ಡಾ. ಎಲ್.ಆರ್. ಶಂಕರ್ ನಾಯ್ಕ್, ಆರ್ ಸಿ ಹೆಚ್ ಅಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ ಇತರರಿದ್ದರು.

## ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅವ್ಯವಸ್ಥೆ

**ಹೊಸಪೇಟೆ:** ತಾಲೂಕಿನ ಬುಕ್ಕಸಾಗರದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಮಂಗಳವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.
ಶಾಲೆಯ ಮಕ್ಕಳ ವಸತಿ ಕೊಠಡಿಗಳನ್ನು ಪರಿಶೀಲಿಸಿದ ಆಯೋಗದ ಸದಸ್ಯರಿಗೆ ಅಲ್ಲಿನ ಅವ್ಯವಸ್ಥೆಗಳು ಆಘಾತ ಉಂಟುಮಾಡಿದವು. ಒಂದು ಕೊಠಡಿಯಲ್ಲಿ ಸುಮಾರು 25 ಮಕ್ಕಳು ವಾಸಿಸುವ ಜತೆಗೆ, ಅದೇ ಸ್ಥಳದಲ್ಲಿ ವಿದ್ಯಾಭ್ಯಾಸವನ್ನೂ ಮಾಡುತ್ತಿರುವುದು ಕಂಡುಬಂದಿದೆ. ಮಕ್ಕಳು ವಾಸಿಸುವ ಮತ್ತು ಕಲಿಯುವ ಸ್ಥಳದಲ್ಲಿ ಕೇವಲ ಒಂದು ಬಲ್ಬ್ ಮಾತ್ರ ಬೆಳಕಿನ ವ್ಯವಸ್ಥೆ, ಶೌಚಾಲಯ ಮತ್ತು ಸ್ನಾನಗೃಹಗಳಲ್ಲಿ ಸರಿಯಾದ ನಿರ್ವಹಣೆ ಇಲ್ಲದೆ ಅವ್ಯವಸ್ಥೆಯಿಂದ ಕೂಡಿರುವುದು ಸ್ಪಷ್ಟವಾಗಿ ಗೋಚರಿಸಿದೆ. ಮಕ್ಕಳ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗುವಂತಹ ಈ ಪರಿಸ್ಥಿತಿಯನ್ನು ಕಂಡು ಶಶಿಧರ ಕೋಸಂಬೆ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕೂಡಲೇ ಶಾಲೆಯ ಪ್ರಾಚಾರ್ಯರನ್ನು ತರಾಟೆಗೆ ತೆಗೆದುಕೊಂಡ ಅವರು, ಮಕ್ಕಳಿಗೆಉತ್ತಮವಾತಾವರಣಕಲ್ಪಿಸುವುದುಶಾಲೆಯಜವಾಬ್ದಾರಿಯಾಗಿದ್ದು, ಕೂಡಲೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಸುಧಾರಿಸುವಂತೆ ಪ್ರಾಚಾರ್ಯರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಭೇಟಿಯ ವೇಳೆ ಆಯೋಗದ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ತೀವ್ರತರ ಅತಿಸಾರ ಭೇದಿಗೆ ಓಆರ್‌ಎಸ್ ಬಳಸಿ

## ಬಳ್ಳಾರಿ ಡಿಹೆಚ್‌ಓ ಡಾ.ಯಲ್ಲಾ ರಮೇಶ್ ಬಾಬು ಹೇಳಿಕೆ | ಅತಿಸಾರ ಬೇಧಿ ನಿಯಂತ್ರಣ ಕಾರ್ಯಕ್ರಮ



**ಹಂಪಿ ಟೈಮ್ಸ್ ಬಳ್ಳಾರಿ**
ಮಕ್ಕಳಲ್ಲಿ ತೀವ್ರತರ ಅತಿಸಾರ ಭೇದಿ ಕಂಡುಬಂದಲ್ಲಿ ಓಆರ್‌ಎಸ್ ದ್ರಾವಣ ಹಾಗೂ ಜಿಂಕ್ ಮಾತ್ರೆ ಬಳಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಯೋಗದೊಂದಿಗೆ ನಗರದ ಬ್ರೂಸ್‌ಪೇಟೆ ನಗರ ಆರೋಗ್ಯ ಕೇಂದ್ರ ವ್ಯಾಪ್ತಿಯ ಬಟ್ಟಿ ಏರಿಯಾ ಕೊರಚಗೇರಿ ಕಾಲೋನಿಯ ಬಸಮ್ಮ ಸ್ಮಾರಕ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ತೀವ್ರತರ ಅತಿಸಾರ ಬೇಧಿ ನಿಯಂತ್ರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.
ಅತಿಸಾರ ಭೇದಿಯು ಹುಟ್ಟಿನಿಂದ 5 ವರ್ಷದೊಳಗಿನ ಮಕ್ಕಳ ಮರಣ ಕಾರಣಗಳಲ್ಲಿ ಒಂದಾಗಿದ್ದು, ಶೇ.10 ರಷ್ಟು ಇದರಿಂದ ಮರಣ ಹೊಂದುತ್ತಾರೆ. ಈ ಹಿನ್ನಲೆಯಲ್ಲಿ ಓಆರ್‌ಎಸ್ ದ್ರಾವಣ ಹಾಗೂ ಜಿಂಕ್ ಮಾತ್ರೆಯನ್ನು 14 ದಿನಗಳ ಕಾಲ ಮಗುವಿಗೆ ನೀಡುವ ಮೂಲಕ ಮಗುವಿನ ಆರೋಗ್ಯ ಕಾಪಾಡುವ ಅತಿಸಾರ ಭೇದಿಯನ್ನು ಬಹು ಸುಲಭವಾಗಿ ನಿಯಂತ್ರಿಸಬಹುದಾಗಿದೆ ಎಂದರು.
ರಾಜ್ಯದಲ್ಲಿ ತೀವ್ರತರ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮವನ್ನು 2014–15ನೇ ಸಾಲಿನಿಂದ " ತೀವ್ರತರ ಅತಿಸಾರ ಭೇದಿಯಿಂದ ಶೂನ್ಯ ಮಕ್ಕಳ ಮರಣ" ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸ ಲಾಗುತ್ತಿದೆ. ಪ್ರಸ್ತುತ 2025–26ನೇ ಸಾಲಿನಲ್ಲಿ ಜೂನ್ 16 ರಿಂದ ಜುಲೈ 31 ರವರೆಗೆ ಜಿಲ್ಲೆಯಾ ದ್ಯಾಂತ ಆಚರಿಸಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 1,97,264 ಮಕ್ಕಳಿಗೆ ಓಆರ್‌ಎಸ್ ಪೊಟ್ಟಣ ಹಾಗೂ ಅಗತ್ಯಯುಳ್ಳವರಿಗೆ ಜಿಂಕ್ ಮಾತ್ರೆ ವಿತರಿಸಲಾಗುವುದು.
ಪೋಷಕರು ಮತ್ತು ಮಕ್ಕಳಿಗೆ ಪರಿಸರ ನೈರ್ಮಲ್ಯ, ಕೈತೊಳೆಯುವ ವಿಧಾನ, ವೈಯಕ್ತಿಕ ಶುಚಿತ್ವದ ಬಗ್ಗೆ ಹಾಗೂ ಅತಿಸಾರ ಭೇದಿಗೆ ಒಳಗಾದ ಮಕ್ಕಳಿಗೆ ಆರೈಕೆ ಮತ್ತು ಚಿಕಿತ್ಸೆ ನೀಡುವ ವಿಧಾನದ ಅರಿವು ಮೂಡಿಸಲು ತಮ್ಮ ಮನೆಗೆ ಆಗಮಿಸುವ ವೈದ್ಯಕೀಯ ತಂಡಗಳಿಗೆ ಸಹಕರಿಸುವಂತೆ ಕೋರಿದರು.
ಶಾಲಾ ಮುಖ್ಯೋಪಾಧ್ಯಾಯರಾದ ರಾಜ ಶೇಖರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಳಚೆ ಪ್ರದೇಶದ ಈ ಶಾಲೆಯಲ್ಲಿ 600ಕ್ಕೂ ಹೆಚ್ಚು ಮಕ್ಕಳು ಓದುತಿದ್ದು, ವೈಯಕ್ತಿಕ ಶುಚಿತ್ವದ ಕಾರ್ಯಕ್ರಮ ನಮ್ಮ ಶಾಲೆಯಲ್ಲಿ ಹಮ್ಮಿಕೊಳ್ಳುವ ಮಕ್ಕಳಿಗೆ ಜಾಗೃತಿ ನೀಡುವ ಆರೋಗ್ಯ ಇಲಾಖೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು.
ವೈದ್ಯರು ಹೇಳಿದಂತೆ ಊಟದ ಪೂರ್ವ ಹಾಗೂ ಶೌಚದ ನಂತರ 6 ವಿಧಾನಗಳ ಮೂಲಕ ಕೈಗಳನ್ನು ತೊಳೆದುಕೊಂಡು ರೋಗ ಹರಡದಂತೆ ಹಾಗೂ ಓಆರ್‌ಎಸ್ ದ್ರಾವಣ ಸಿದ್ದಪಡಿಸಿದ ನಂತರ 24 ಗಂಟೆಯೊಳಗಡೆ ಬಳಸುವಂತೆ ಮಕ್ಕಳು ಜಾಗೃತಿ ವಹಿಸಬೇಕು ಎಂದು ತಿಳಿಸಿದರು.
ಕೈತೊಳೆಯುವ ವಿಧಾನ ಹಾಗೂ ಓಆರ್‌ಎಸ್ ದ್ರಾವಣ ತಯಾರಿಕೆ ಕುರಿತು ಸಿಬ್ಬಂದಿಯವರು ಪ್ರಾತ್ಯಕ್ಷತೆಯ ಮೂಲಕ ಮಕ್ಕಳಿಗೆ ಜಾಗೃತಿ ನೀಡಿದರು. ಬ್ರೂಸ್‌ಪೇಟೆಯ ನಗರ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸುರೇಖಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್, ಮುಖ್ಯ ಗುರುಗಳಾದ ಚೆನ್ನನಗೌಡ, ಶಿಕ್ಷಕರಾದ ನಾಗರಾಜ್, ವಿರುಪಾಕ್ಷಿ, ಜಿಲ್ಲಾ ನರ್ಸಿಂಗ್ ಅಧಿಕಾರಿ ಜಿ.ಗಿರೀಶ್ ಕುಮಾರ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ಚೈತ್ರ, ಪ್ರಸನ್ನ ಜ್ಯೋತಿ, ಅರುಣಾ ಜ್ಯೋತಿ, ಆರೋಗ್ಯ ನಿರೀಕ್ಷಣಾದಿ, ಕಾರಿಗಳಾದ ಶಿಲ್ಪ, ದೀಪ ಸೇರಿದಂತೆ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ತೋಟಗಾರಿಕೆ ಇಲಾಖೆ: ವಿವಿಧ ಹಣ್ಣಿನ ಸಸಿ, ಕಸಿ ಗಿಡಗಳ ಮಾರಾಟ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರ ಮತ್ತು ಸಸ್ಯ ನರ್ಸರಿಗಳಲ್ಲಿ ಉತ್ತಮ ಗುಣಮಟ್ಟದ ಕಸಿ, ಸಸಿಗಳನ್ನು ಉತ್ಪಾದಿಸಿ. ರೈತರಿಗೆ ಇಲಾಖೆಯ ದರದಲ್ಲಿ ವಿತರಿಸಲಾಗುತ್ತಿದೆ ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯ ನಿರ್ದೇಶಕರು ತಿಳಿಸಿದ್ದಾರೆ.
ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಪ್ರದೇಶ ವಿಸ್ತರಣೆ ಕೈಗೊಳ್ಳುವ ರೈತ ಭಾಂದವರು ತೋಟಗಾರಿಕೆ ಇಲಾಖೆಯ ವಿವಿಧ ತೋಟಗಾರಿಕೆ ಕ್ಷೇತ್ರದ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳು. ಮಾವು, ಸಪೋಟ, ಪೇರಲ, ನಿಂಬೆ, ಕರಿಬೇವು, ನೇರಳೆ ಮತ್ತು ನುಗ್ಗೆ ಹಾಗೂ ವಿವಿಧ ಅಲಂಕಾರಿಕ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ರೈತ ಭಾಂದವರು ಹಾಗೂ ಸಾರ್ವಜನಿಕರು ಖರೀದಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ನಾಗತಿಬಸಾಪುರ ತೋಟಗಾರಿಕೆ ಕ್ಷೇತ್ರ, ಹೂವಿನಹಡಗಲಿ ಮೊ. 9686508432, 9148297982, ಮಾಲವಿ ತೋಟಗಾರಿಕೆ ಕ್ಷೇತ್ರ, ಹಗರಿಬೊಮ್ಮನಹಳ್ಳಿ ಮೊ.9880367794, 8495882552, 9900775894, ಬುಕ್ಕಸಾಗರ ತೋಟಗಾರಿಕೆ ಕ್ಷೇತ್ರ ಹೊಸಪೇಟೆ ಮೊ.9591521042, ಕೊಟ್ಟೂರು ತೋಟಗಾರಿಕೆ ಕ್ಷೇತ್ರ ಮೊ.9663832857, ಕೆ.ಕಲ್ಲಹಳ್ಳಿ ತೋಟಗಾರಿಕೆ ಕ್ಷೇತ್ರ, ಹರಪನಹಳ್ಳಿ ಮೊ.7892383890, ಆನಂದ ದೇವನಹಳ್ಳಿ, ತೋಟಗಾರಿಕೆ ಕ್ಷೇತ್ರ ಹಗರಿಬೊಮ್ಮನಹಳ್ಳಿ ಮೊ. 9742968270, ಚಿಕ್ಕಜೋಗಿಹಳ್ಳಿ, ತೋಟಗಾರಿಕೆ ಕ್ಷೇತ್ರ ಕೂಡ್ಲಿಗಿ ಮೊ.9483923322, ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಯುಪಿಎಸ್‌ಸಿ ಮುಖ್ಯ ಪರೀಕ್ಷಾ ಪೂರ್ವ ತರಬೇತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದವರಿಗೆ ಯುಪಿಎಸ್‌ಸಿ ಮುಖ್ಯ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.
ಆಸಕ್ತ ಅಭ್ಯರ್ಥಿಗಳು ನಿರ್ದೇಶನಾಲಯದ ಪೋರ್ಟಲ್‌ನ https://dom.karnataka.gov.in ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜೂ.21 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲನಾ ಅಜಾದ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ದೂ.08392–200125/224 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
Searching for the perfect platform to promote your brand?
Want to reach more people?
Choose HAMPI TIMES
Scan to read epaper



HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com

10% BETTER EFFICIENCY
EASY TO OPERATE
LOW SERVICE COST
LIGHTER
0 TO 50° C
SERVICE EFFICIENCY
EXTENDED SERVICE INTERVALS
HEAVY DUTY AIR FILTER
HIGH RESELL VALUE



Grow Your Business
With Us
S.M.Traders & Services
9686663125 - 9686663132 - 9686413132
Atlas Copco